ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸಂಪುಟ 4 ಸಂಚಿಕೆ 4 ಜುಲೈ 2011

ಶ್ರೀ ರಾಮಚಂದ್ರ ಮಿಷನ್®

India ECHOES
ONE WORLD ONE HUMANITY



## ಚೆನ್ನೈ

### ಭಾರತದ ಸಲುವಾಗಿ ಪರಿಣತಿ ತರಬೇತಿ ಕಾರ್ಯಕ್ರಮ (16 ರಿಂದ 24 ನೇ ಏಪ್ರಿಲ್)

ಗುರುಗಳು ಭಾರತದ ಸಲುವಾಗಿ ನಡೆದ ಪರಿಣತಿ ತರಬೇತಿ ಕಾರ್ಯಕ್ರಮದ ಉದ್ಘಾಟನೆ ಹಾಗೂ ಮುಕ್ತಾಯ ಸಮಾರಂಭ ಎರಡರಲ್ಲೂ ಭಾಗವಹಿಸಿ,ಎರಡು ಸಭೆಗಳಲ್ಲೂ ಭಾಷಣ ನೀಡಿದರು. ಉದ್ಘಾಟನಾ ಭಾಷಣದಲ್ಲಿ ಅವರು ಹೀಗೆ ಹೇಳಿದರು "ಆದ್ದರಿಂದ ಸಹಜಮಾರ್ಗದ ಬೋಧನೆ0ಯಲ್ಲಿರುವ ಅತ್ಯಾವಶ್ಯಕವಾದ ಅಂಶವೆಂದರೆ ಪ್ರಾಣಾಹುತಿ. ಪ್ರಾಣಾಹುತಿಯು ತರಬೇತಿ0ಯ ಒಂದು ಪ್ರಕ್ರಿಯೆ, ಅದೊಂದು ನಿಮ್ಮ ಜೀವನಕ್ಕೆ 'ಪ್ರಾಣಸ್ಯ ಪ್ರಾಣವನ್ನು' ನೀಡುವ ಪ್ರಕಿಯೆ ಎಂಬುದು ನನ್ನ ನಂಬಿಕೆ. ಅದು ಗುರುಗಳ ಅನುಗ್ರಹ ಮತ್ತು ಶಕ್ತಿ ಸಾಮರ್ಥ್ಯಗಳನ್ನು ನಮ್ಮೊಳಗೆ ತಲುಪಿಸುವ ಒಂದು ಪ್ರಕ್ರಿಯೆಯೂ ಕೂಡಾ ಆಗಿದೆ." ಮುಕ್ತಾಯ ಭಾಷಣದಲ್ಲಿ ಅವರು ಗಮನವಿಟ್ಟು ಕೇಳುವುದರ ಅಗತ್ಯ ಮತ್ತು ನಾವು ಏನನ್ನು ಕೇಳುತ್ತೇವೆಯೋ ಅದನ್ನು ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಬಗ್ಗೆ ಸ್ಪಷ್ಟಪಡಿಸಿದರು.ಗುರುಗಳು CCTV0ಯ ಮೂಲಕ ತಮ್ಮ ಕುಟೀರದಲ್ಲಿ0ಯೇ ಕುಳಿತು ಎಲ್ಲಾ ಭಾಷಣಗಳನ್ನು ಸಹಾ ವೀಕ್ಷಿಸಿದರು.

### ಬಾಬೂಜಿ0ಯವರ ಮಹಾಸಮಾಧಿ0ಯ ದಿನ 19 ನೇ ಏಪ್ರಿಲ್ 2011

ಗುರುಗಳು ಬೇಗನೆ ಎದ್ದು ಪ್ರಶಿಕ್ಷಕರಿಗೆ ತಯಾರಿಯ ಬೈಠಕ್‌ಗಳನ್ನು ನೀಡುವುದರಲ್ಲಿ, ನಂತರ ತಮ್ಮ ಉಪಹಾರದ ಮುನ್ನವೇ ಇ ಮೇಲ್‌ಗಳನ್ನು ನೋಡುವುದರಲ್ಲಿ ನಿರತರಾಗಿದ್ದರು. ಅವರಿಗೆ ಅಂದು ಬೆಳಗಿನ ಸತ್ಸಂಗವನ್ನು ನಡೆಸಿಕೊಡುವ ಯಾವ ಯೋಜನೆಯೂ ಇರಲಿಲ್ಲವಾದರೂ, ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಡುವರು ಎಂಬ ಸುದ್ದಿಯು ಆಶ್ರಮದಲ್ಲೆಲ್ಲಾ ಹರಡಿತ್ತು. ಈ ಸುದ್ಧಿ0ಯನ್ನು ಕೇಳಿದಾಗ ಅವರೇ ಆಶ್ಚರ್ಯಪಟ್ಟರು. ಆದರೆ ನಂತರ ತಾವೇ ನಡೆಸಿಕೊಡಲು ನಿರ್ಧರಿಸಿದರು. ಅವರು ಧ್ಯಾನಮಂದಿರವನ್ನು ಪ್ರವೇಶಿಸಿದಾಗ ಹೂಮಾಲೆಗಳು ತಯಾರಾಗದ ಕಾರಣ, ಅದು ಬರುವ ತನಕ ಕಾಯುವುದೆಂದು ನಿರ್ಧರಿಸಿ, ಸುಮಾರು 15 ನಿಮಿಷಗಳ ಕಾಲ ಮೆಟ್ಟಿಲುಗಳ ಬಳಿಯಲ್ಲಿ ಕಾಯುತ್ತಿದ್ದರು ಮತ್ತು ಹೂಮಾಲೆಗಳು ಬಂದನಂತರ ಮೆಟ್ಟಿಲುಗಳನ್ನು ಏರಿ ಲಾಲಾಜಿ ಮತ್ತು ಬಾಬೂಜಿಯವರ ಭಾವಚಿತ್ರಗಳಿಗೆ ಅವುಗಳನ್ನು ಹಾಕಿದ ನಂತರವೇ ಸತ್ಸಂಗವನ್ನು ನಡೆಸಿಕೊಟ್ಟರು.

### ಬಾಬೂಜಿ ಮಹಾರಾಜರ ಜನ್ಮದಿನೋತ್ಸವ (ಏಪ್ರಿಲ್ 29 ರಿಂದ ಮೇ 1ರವರೆಗೆ).

ಉತ್ಸವವು ಏಪ್ರಿಲ್ 29ರಿಂದ ಮೇ 1ರವರೆಗೆ ನಡೆದು,ಆ ಮೂರೂ ದಿನ ಬೆಳಗ್ಗೆ 7:30ಕ್ಕೆ ಮತ್ತು ಸಂಜೆ 5 ಗಂಟೆಗೆ ಸತ್ಸಂಗವಿರುವುದೆಂದು ಪ್ರಕಟನೆ ಮಾಡಲಾಗಿತ್ತು.ಸುಮಾರು 4,000 ಅಭ್ಯಾಸಿಗಳು ಉತ್ಸವದಲ್ಲಿ ಭಾಗವಹಿಸಿದ್ದರು ಮತ್ತು ಗುರುಗಳು ಈ ಮೂರೂ ದಿನದಂದು ಬೆಳಗಿನ ಸತ್ಸಂಗವನ್ನು ತಾವೇ ನಡೆಸಿಕೊಟ್ಟರು. ಪ್ರತೀ ಸತ್ಸಂಗವೂ ಸುಮಾರು 1 ಗಂಟೆ 15 ನಿಮಿಷಗಳ ಕಾಲ ನಡೆಯಿತು ಮತ್ತು ಮೇ 1ರ ಬೆಳಗಿನ, ಕೊನೆಯ ಸತ್ಸಂಗವು ಸಮಾರು 1 ಗಂಟೆ 25 ನಿಮಿಷಗಳ ಕಾಲ ನಡೆಯಿತು.

ಏಪ್ರಿಲ್ 30,ಈ ಮಂಗಳಕರವಾದ ದಿನದಂದು ಗುರುಗಳು ಎಂಟು ವಿವಾಹಗಳನ್ನು ನೆರವೇರಿಸಿದರು. ಸಹೋದರಿ0ಯರಿಬ್ಬರು ಭಜನೆಗಳನ್ನು ಹಾಡಿದರು. ಗುರುಗಳು ಅನೇಕ ಪುಸ್ತಕಗಳನ್ನು ಹಾಗೂ ಆಡಿ0ಯೋ–ವೀಡಿ0ಯೋ ಸಿ. ಡಿಗಳನ್ನು ಬಿಡುಗಡೆ ಮಾಡಿದರು. ಜುಲೈ 24ರ ಉತ್ಸವದಲ್ಲಿ ಅವಲಭ್ಯವಾಗಲಿರುವ, ಕಡಿಮೆ ಪ್ರಮಾಣದಲ್ಲಿ ಮುದ್ರಣಗೊಳ್ಳುತ್ತಿರುವ ಫೋಟೋಗಳನ್ನು ಮುಂಗಡವಾಗಿ ಕಾಯ್ದಿರಿಸಿಕೊಳ್ಳುವುದರ ಬಗ್ಗೆ ಗುರುಗಳ ಮೊಮ್ಮಗ ಭಾರ್ಗವ್ ಪ್ರಕಟನೆ0ಯನ್ನು ಮಾಡಿದರು. ಗುರುಗಳು ಈ ಫೋಟೋಗಳನ್ನು ನೋಡಲು ಅವುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದ ಉಪ್ಪರಿಗೆ0ಯ ಮೊಗಸಾಲೆಗೆ(ಗ್ಯಾಲ್ಲರಿ) ಹೋದರು. ಹಿತಕರವಾದ ತುಂತುರು ಮಳೆ0ಯೂ ಸಹ ಗುರುಗಳೊಂದಿಗೆ ಈ ಅಶ್ರಮ ಸಂಚಾರದಲ್ಲಿ ಜೊತೆಗೂಡಿತ್ತು.

ಸಂಜೆ 6:30ಕ್ಕೆ ಹೈದರಾಬಾದ್ ಕೇಂದ್ರದ ಅಭ್ಯಾಸಿಗಳು ಒಂದು ಸುಂದರವಾದ ನಾಟಕ ಪ್ರದರ್ಶನವನ್ನು ನೀಡಿದರು. ಅದರಲ್ಲಿ ಒರ್ವ ಜಿಜ್ಞಾಸುವಿಗೆ ತನ್ನ ಮಾರ್ಗದಲ್ಲಿ ಪೂರ್ವಾಗ್ರಹ, ಭ0ಯ, ಕ್ರೋಧ, ಆಲಸ್ಯ, ಸಂದೇಹ ಮುಂತಾದವುಗಳಿಂದ ಉಂಟಾಗುವ ಅಡಚಣೆಗಳು ಮತ್ತು ಅವುಗಳನ್ನು ದಾಟಿ ಮುಂದುವರೆ0ಯಲು ಬೇಕಾದ ಶ್ರದ್ಧೆ,ಪ್ರೇಮ,ಶಿಸ್ತು, ಸಹನಶೀಲತೆ ಮುಂತಾದ ಉತ್ತಮ ಗುಣಗಳ ಆ0ಯ್ಕೆ0ಯನ್ನು ಮಾಡುವುದರ ಬಗ್ಗೆ ನಿರೂಪಣೆ ಮಾಡಿ ತೋರಿಸಿದರು.ಆಧ್ಯಾತ್ಮಿಕವಾಗಿ ಸಶಕ್ತಗೊಂಡಿರುವ ಧ್ಯಾನಮಂದಿರದ ಆ ವಾತಾವರಣದಲ್ಲಿ ಆ ತಂಡದವರಿಂದ ಚೆನ್ನಾಗಿ ಮೂಡಿಬಂದ ಆ ನಾಟಕವು ಎಲ್ಲರ ಹೃದ0ಯಗಳನ್ನು ಮುಟ್ಟಿತು. ನಾಟಕದ ಪಾತ್ರಧಾರಿಗಳೆಲ್ಲರನ್ನೂ ನಂತರ ಗುರುಗಳು ತಮ್ಮ ಕುಟೀರದಲ್ಲಿ ಭೇಟಿಮಾಡಿದರು. ಮೇ 1ರ ಸಂಜೆ ಬುದ್ಧನ ಜೀವನಾಧಾರಿತ ನಾಟಕವೊಂದನ್ನು ಚೆನ್ನೈ ಕೇಂದ್ರದ 0ಯುವ ಅಭ್ಯಾಸಿಗಳು ಪ್ರದರ್ಶಿಸಿದರು. ಈ ಕಾ0ರ್ಯಕ್ರಮವನ್ನೂ ಸಹಾ ಗುರುಗಳು CCTV0ಯ ಮೂಲಕ ವೀಕ್ಷಿಸಿದರು.

ಮೂರು ದಿನಗಳ ಈ ಉತ್ಸವವು ಮೇ 1ರಂದು ಮುಕ್ತಾ0ಯವಾಯಿತು. ಆದರೆ ಗುರುಗಳು ಮಾಡಿದ ಆಧ್ಯಾತ್ಮಿಕ ಕೆಲಸವು ಖಂಡಿತವಾಗಿ0ಯೂ ನಮ್ಮಲ್ಲಿ ಉಳಿದು,ನಮ್ಮೆಲ್ಲರ ಹೃದ0ಯಗಳಲ್ಲಿ ಬೆಳೆ0ಯುತ್ತದೆ.ಗುರುಗಳು ಗಾ0ಯತ್ರಿಗೆ ಕೇವಲ ಒಂದು ದಿನದ ಮಟ್ಟಿಗೆ ಹೋಗಿ ಬಂದ ನಂತರ,ಮೇ 3ರಂದು ರಸ್ತೆ0ಯ ಮಾರ್ಗದಲ್ಲಿ ಬೆಂಗಳೂರಿಗೆ ಹೊರಟರು.






ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಅಡಿಜೇಸ್ ಸೆಮಿನಾರ್

ಬೆಂಗಳೂರು, ಮೇ 3 ರಿಂದ 14ರವರೆಗೆ



ಕಳೆದ 30 ವರ್ಷಗಳಲ್ಲಿ ಸಂಸ್ಥೆಯು ವೇಗವಾಗಿ ಬೆಳೆಯುತ್ತಾ ಅಭಿವೃದ್ಧಿ ಹೊಂದಿದೆ. ಸಹಜ ಮಾರ್ಗವು ಅದರ ಬೋಧನೆ ಮತ್ತು ಸಾಧನೆಯ ನೈಜವಾದ ಪರಿಶುದ್ಧತೆಯನ್ನು ಉಳಿಸಿಕೊಂಡು,ತನ್ನ ಸೇವೆಯನ್ನು ಪರಿಣಾಮಕಾರಿಯಾಗಿ ಮುಂದುರೆಸಿಕೊಂಡು ಹೋಗಲಿ ಎಂಬ ಉದ್ದೇಶದಿಂದ ಗುರುಗಳು ಸಂಸ್ಥೆಯ ವ್ಯವಸ್ಥಿತ ರಚನೆಯ ಚೌಕಟ್ಟಿನಲ್ಲಿ ತಿದ್ದುಪಡಿ ಮಾಡಲು ಮೊಟ್ಟಮೊದಲನೆಯ ಹೆಜ್ಜೆಯನ್ನಿಟ್ಟಿದೆ.

ಇಂದು ವಿಶ್ವದ ಆಡಳಿತ ನಿರ್ವಹಣಾ ಚಿಂತಕರಲ್ಲಿ ಪ್ರತಿಭಾವಂತರಾದ ಡಾ॥ ಇಚಾಕ್ ಅಡಿಜೇಸ್ ಅವರನ್ನು ನಮ್ಮ ಸಂಸ್ಥೆಯ ಪುನಃರಚನೆಗಾಗಿ ನಿಯೋಜಿಸಿದ್ದಾರೆ. ಸಹಜ ಮಾರ್ಗದ ವೈವಿಧ್ಯತೆಯನ್ನು ಬಿಂಬಿಸುವ 25 ಅಭ್ಯಾಸಿಗಳ ತಂಡವೊಂದನ್ನು ಆಯ್ದು,ಅವರಿಗೆ ಪರಂಧಾಮದಲ್ಲಿ ಡಾ॥ ಅಡಿಜೇಸ್ ಮತ್ತು ಗುರುಗಳು ಗಾಢವಾಗಿ, ಉದ್ದೇಶಪೂರ್ವಕವಾಗಿ ಯೋಚಿಸಿ ಮಾರ್ಗದರ್ಶನ ಮಾಡಿದರು.

ಅಡಿಜೇಸ್ ಅವರ ಕ್ರಮಬದ್ಧ ವರ್ಗೀಕರಣವನ್ನು ಶ್ರೀ ರಾಮ ಚಂದ್ರ ಮಿಷನ್ ಮತ್ತು ಅದರ ದತ್ತಿ ಸಂಸ್ಥೆಗಳ ಭವಿಷ್ಯದ ಸಂಸ್ಥೆಯ ಸ್ವರೂಪದ ವಿನ್ಯಾಸಕ್ಕೆ ತಕ್ಕಂತೆ ಹೊಂದಿಸಿ,ಯೋಗ್ಯವಾಗಿ ಪ್ರಯೋಗಿಸಿದರು. ಹೊಸ ಸಂಸ್ಥೆಯ ಸ್ವರೂಪದ ಜೊತೆಗೆ ಇರುವ ಆಶಯಗಳು–

- ➢ ಉತ್ಕಾಂಕ್ಷಿಗಳಿಗೆ ನಾವು ನೀಡುವ ಆಧ್ಯಾತ್ಮಿಕ ಬೆಂಬಲವನ್ನು ಬಲಪಡಿಸುವುದು.
- ➢ ಸಂಸ್ಥೆಯೊಳಗಿರುವ ಸೇವಾ ಮತ್ತು ಸಹಕಾರ ಮನೋಭಾವನೆಯನ್ನು ರಕ್ಷಿಸುವುದು.
- ➢ ಆಧ್ಯಾತ್ಮಿಕ ಉದ್ದೇಶಕ್ಕೆ ಅಡ್ಡಿಮಾಡದಂತಹ,ಒಂದು ಬಿರುಕಿಲ್ಲದ ಸಂಸ್ಥೆಯನ್ನು ಸೃಷ್ಟಿಸುವುದು.
- ➢ ಕಡೆಯದಾಗಿ ಗುರುಗಳ ಮೇಲೆ ಹೆಚ್ಚಾಗುತ್ತಿರುವ ಆಡಳಿತದ ಕಾರ್ಯಭಾರದ ಹೊರೆಯನ್ನು ಕಡಿಮೆ ಮಾಡುವುದು.

## ಈ ಉದ್ದೇಶಪೂರಿತ ಯೋಜನೆಗಳಿಂದಾದ ಮೂರು ಪ್ರಮುಖ ಪರಿಣಾಮಗಳು

ಸಹಜಮಾರ್ಗವನ್ನು ಭವಿಷ್ಯದೆಡೆಗೆ ಕೊಂಡೊಯ್ಯುವುದಕ್ಕಾಗಿ ಸಂಸ್ಥೆಯ ರಚನೆಯ ಚೌಕಟ್ಟೊಂದನ್ನು ನಿರ್ಮಿಸಿದರು ಹಾಗೂ ಗುರುಗಳು ತಮ್ಮ ಜೀವನದ ಉದ್ದೇಶವನ್ನು ಪೂರ್ಣಗೊಳಿಸಲು ಅವರ ನೆರವಿಗಾಗಿ ಜಾಗತಿಕ ಮಟ್ಟದ ಸೇವಾ ತಂಡವೊಂದನ್ನು ಆಯ್ಕೆಮಾಡುವುದು.

ಸಹಜ ಮಾರ್ಗ ಸೇವೆಯ ವಿದ್ಯುಕ್ತ ಸಭೆಯೊಂದನ್ನು ನಿರ್ಮಿಸಿ,ಅದು ಈ ಉದ್ದೇಶಪೂರಿತ ಯೋಜನೆಗಳ ಸಾರವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವಂತೆ ಮಾಡಿ,ಅದಕ್ಕೆ ಗುರುಗಳು ಹಾಗೂ ಭಾಗವಹಿಸಿದವರೆಲ್ಲರೂ ಸಹಿ ಹಾಕಿದರು.

ಪ್ರೇಮ ಮತ್ತು ಸೇವೆಗೆ ಪುನಃ ಬದ್ಧರಾಗುವುದು. ಗುರುಗಳು "ಪ್ರೇಮವೇ ನಮ್ಮ ಮಂತ್ರ, ಅದು ನಮ್ಮ ಕಾರ್ಯಶಕ್ತಿ ಮತ್ತು ಅದು ನಮ್ಮ ಪ್ರಾರ್ಥನೆ" ಎಂದು ಹೇಳಿದರು. ಸೇವೆಯ ಬಗ್ಗೆ ಅವರು "ನಮ್ಮ ವಿಮೋಚನೆಯು ಕೇವಲ ನಿಸ್ವಾರ್ಥ ಸೇವೆಯಿಂದಷ್ಟೇ ಸಾಧ್ಯ!"

ಗುರುಗಳ ನೇರವಾದ ಮಾರ್ಗದರ್ಶನ ಹಾಗೂ ಆದೇಶಗಳ ಅಡಿಯಲ್ಲಿ,ಪ್ರಪಂಚದಾದ್ಯಂತ ಇರುವ ಸಂಸ್ಥೆ ಹಾಗೂ ಅದರ ದತ್ತಿ ಸಂಸ್ಥೆಗಳ ಕಾರ್ಯನಿರ್ವಹಣೆ ಈ ತಂಡದ ಜವಾಬ್ದಾರಿಯಾಗಿದೆ.

## ಬೆಂಗಳೂರು

ಗುರುಗಳು ಮಧ್ಯಾಹ್ನ ಸುಮಾರು 2:15ಕ್ಕೆ ನಾಟ್ರಾಂಪಲ್ಲಿಯಿಂದ ಹೊರಟು ಸಂಜೆ 5 ಗಂಟೆಗೆ ಬೆಂಗಳೂರಿನ ಕ್ರೆಸ್ಟನ್ನು ತಲುಪಿ ಪ್ರಸಾದವನ್ನು ಅರ್ಪಿಸಿದರು. ನಂತರ ಸ್ವಲ್ಪ ಸಮಯ ವಿಶ್ರಮಿಸಿಕೊಂಡು ತಮ್ಮ ಗಾಲ್ಫ್ ಗಾಡಿಯಲ್ಲಿ ಹೊಸದಾಗಿ ಶೈಕ್ಷಣಿಕ ಕಟ್ಟಡದ ನಿರ್ಮಾಣ ಕಾರ್ಯಗಳು ನಡೆಯುತ್ತಿದ್ದ ಸ್ಥಳ ಪರಿಶೀಲನೆಗಾಗಿ ಆಶ್ರಮದಲ್ಲಿ ಒಂದು ಚುರುಕಾದ ಸುತ್ತಾಟವನ್ನು ಮಾಡಿದರು. ನಂತರ ಸಂಜೆಯ ಸತ್ಸಂಗವನ್ನು ನಡೆಸಿಕೊಟ್ಟರು.

ಮರುದಿನ ಬೆಳಗ್ಗೆ ಸತ್ಸಂಗದ ನಂತರ, ಗುರುಗಳು ತಮ್ಮ ಗಾಲ್ಫ್ ಗಾಡಿಯಲ್ಲಿ ಹೊರಟು, ಮಾರ್ಗದ ಪಕ್ಕದಲ್ಲಿ ಸಾಲಾಗಿ ನಿಂತಿದ್ದ ಅಭ್ಯಾಸಿಗಳೊಡನೆ ಅಲ್ಲಲ್ಲಿ ನಿಲ್ಲಿಸಿ ಮಾತನಾಡಿಸುತ್ತಾ ಸುತ್ತಾಟ ನಡೆಸಿದರು. ಹೀಗೆ ಬಹಳ ಸಹನೆಯಿಂದ ಅಭ್ಯಾಸಿಗಳೊಡನೆ ಸುಮಾರು ಒಂದು ಗಂಟೆಯಷ್ಟು ಕಾಲ ಪ್ರತಿಸ್ಪಂದನದಲ್ಲಿ ಕಳೆದರು. ಸ್ವಲ್ಪ ಸಮಯದ ನಂತರ ಅವರು ಬೆಂಗಳೂರು ನಗರಕ್ಕೆ ಹೊರಟರು. ದಿನಾಂಕ 5ರಂದು ಶುರುವಾಗಲಿದ್ದ ಅಡಿಜೇಸ್ ಸೆಮಿನಾರಿಗಾಗಿ ಪರಂಧಾಮ ಆಶ್ರಮದಲ್ಲಿ ಮಾಡಲಾಗುತ್ತಿದ್ದ ಸಿದ್ಧತೆಯನ್ನು ಪರಿಶೀಲಿಸಿದರು. ಅವರು ಆ ಕೆಲಸದ ಗುಣಮಟ್ಟವನ್ನು ಪ್ರಶಂಸಿಸಿದರು ಮತ್ತು ಎಲ್ಲಾ ರೀತಿಯ ಸಿದ್ಧತೆಯ ಬಗ್ಗೆ ಹರ್ಷಗೊಂಡರು.



## ಜಾಗತಿಕ ಸೇವಾ ತಂಡ

| | |
|---|---|
| ಪಿ.ಆರ್. ಕೃಷ್ಣ | ಅಧ್ಯಾತ್ಮಿಕ ಕಾರ್ಯಕ್ರಮದ ಅಭಿವೃದ್ಧಿ |
| ಸಂಜಯ್ ಭಾಟಿಯಾ | ವ್ಯವಸ್ಥಾಪಕ, ಲಾಲಾಜಿ ಮೆಮೋರಿಯಲ್ ಶಿಕ್ಷಣ ಸಂಸ್ಥೆ |
| ಸಂತೋಷ್ ಶ್ರೀನಿವಾಸನ್ | ಆಧ್ಯಾತ್ಮಿಕ ತರಬೇತಿ ಬಟವಾಡೆ |
| ರಿಷಭ್ ಕೊಠಾರಿ | ಸದಸ್ಯರ ಸೇವೆಗಳು |
| ಚಕ್ ಶ್ರೀಪ್ರಸಾದ್ | ನಿರಂತರ ಅಭಿವೃದ್ಧಿ |
| ರಾಜೇಂದ್ರಸಿಂಗ್ ರಾಥೋಡ್ | ಆಧ್ಯಾತ್ಮಿಕ ಸೇವೆ, ಭಾರತ |
| ಪೌಲ್ ಎಂ ಜೂಲ್ | ಆಧ್ಯಾತ್ಮಿಕ ಸೇವೆ, ಪಶ್ಚಿಮ |
| ನಿತಿನ್ ಗೋವಿಲ | ಆಧ್ಯಾತ್ಮಿಕ ಸೇವೆ, ಪೂರ್ವ |
| ವಿಲಿಯಂ ವೇಕಾಟ್ | ಆಧ್ಯಾತ್ಮಿಕ ಸೇವೆ, ಅಮೇರಿಕಾ |
| ಎನ್.ಎಸ್. ನಾಗರಾಜ | ಆಧ್ಯಾತ್ಮಿಕ ಸೇವೆ, CIS |
| ಶರತ್ ಹೆಗ್ಡೆ | ಸಮುದಾಯ ಬೆಳವಣಿಗೆ |
| ಸುಧೀರ್ ಮಾರ್ವಹ | ಜಾಗತಿಕ ಸ್ಥಿರ ಆಸ್ತಿ ಸಹಾಯಕ |
| ಸಂತೋಷ್ ಖಾಂಜೀ | ಜಾಗತಿಕ ಕಾರ್ಯಾಚರಣೆಗೆ ಸಹಾಯಕ |
| ಕಮಲೇಶ್ ಪಟೇಲ್ | ಸಾರ್ವಜನಿಕ ತನಿಖಾಧಿಕಾರಿ |

ಸಂಪುಟ 4 ಸಂಚಿಕೆ 4 ಜುಲೈ 2011

ಶ್ರೀ ರಾಮಚಂದ್ರ ಮಿಷನ್®

ಎಖೋಸ್ ಇಂಡಿಯಾ ವಾರ್ತಾಪತ್ರ


ಈರೋಡ


ಮಳಂಪುರ

## ತಮಿಳುನಾಡು ಪ್ರ0ಯಾಣ

ಮೇ 14ರಂದು ಬೆಂಗಳೂರಿನಿಂದ ಹೊರಟು ಕೃಷ್ಣಗಿರಿ ಆಶ್ರಮವನ್ನು ತಲುಪಿದರು. ಅಲ್ಲಿ ಅವರ ಬೆಂಗಳೂರು ಹಾಗೂ ಸುತ್ತಮುತ್ತಲಿನ ಕೇಂದ್ರಗಳಿಂದ ಬಂದಿದ್ದ ಅಭ್ಯಾಸಿಗಳಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ಬಹಳ ಸಂತೋಷದಿಂದಿದ್ದರು ಹಾಗೂ ಸತ್ಸಂಗದ ನಂತರ ಹಗುರವಾದ ಹೃದ0ಯವುಳ್ಳವರಾಗಿ ಕೆಲ ಅಭ್ಯಾಸಿಗಳೊಡನೆ ತಮಾಷೆಗಳನ್ನು ಮಾಡಿದರು.ನಂತರ ಅವರು ಈರೋಡ್‌ಗೆ ತೆರಳಿದರು.

"ಬೆಳೆ0ಯುತ್ತಿರುವ ಗಿಡಕ್ಕೆ ನೀರು ಹೇಗೋ, ಹಾಗೆ ಮಕ್ಕಳಿಗೆ ವಿದ್ಯಾಭ್ಯಾಸ.

ಸೂ0ರ್ಯನ ಪ್ರಕಾಶವು ಜ್ಞಾನದಂತೆ ಅದು ಗಿಡವು ಸಂಪೂರ್ಣವಾಗಿ ಬೆಳೆದು, ಪುಷ್ಪಿತಗೊಂಡು, ತನ್ನ ಸುವಾಸನೆ0ಯನ್ನು ಎಲ್ಲೆಡೆ ಪಸರಿಸುತ್ತದೆ.

**ಪ್ರೇಮವೇ ಆ ಸೂ0ರ್ಯ!!"**

ಗುರುಗಳು ಈರೋಡನ್ನು ಮಧ್ಯಾಹ್ನ 12:30ಕ್ಕೆ ತಲುಪಿದರು. ಪ್ರ0ಯಾಣದಿಂದ ದಣಿವಾಗಿದ್ದರೂ ಸಹಾ ಅವರು ಹಸನ್ಮುಖರಾಗಿದ್ದು,ಅಭ್ಯಾಸಿಗಳನ್ನು ನೋಡಿ ಸಂತೋಷಗೊಂಡರು. ಸ್ವಲ್ಪ ಕಾಲ ವಿಶ್ರಾಂತಿ ಪಡೆದು, ಸಂಜೆ ನಾಲ್ಕು ಗಂಟೆಗೆ ಭೋಜನಾಲ0ಯದ ಉದ್ಘಾಟನೆ0ಯನ್ನು ಮಾಡಿದರು. ನಂತರ ಅಲ್ಲಿ ನೆರೆದಿದ್ದ ಸುಮಾರು 1000 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿಕೊಟ್ಟರು. 12ನೇ ತರಗತಿ0ಯನ್ನು ಈ ವರ್ಷ ಮುಗಿಸಿರುವ ಅಭ್ಯಾಸಿಗಳ ಮಕ್ಕಳು ತಮ್ಮ ಅಭ್ಯಾಸವನ್ನು ಪ್ರಾರಂಭಿಸಲು ಆ ಸತ್ಸಂಗದಲ್ಲಿ ಕುಳಿತುಕೊಳ್ಳಲು ಗುರುಗಳು ಅನುಮತಿ ನೀಡಿದರು. ಅವರು ನಂತರ ಕೇಂದ್ರ ಮುಖ್ಯಸ್ಥರು ಮತ್ತು ಪ್ರಶಿಕ್ಷಕರೊಡನೆ ಕೇಂದ್ರದ ಪ್ರಗತಿಯ ಕುರಿತು ಚರ್ಚಿಸಿದರು. ಈರೋಡ್‌ನಿಂದ ವಾಹನಗಳ ಸಾಲು ತಿರುಪ್ಪೂರಿನ ಡಿಜೆಪಾರ್ಕ್‌ಗೆ ಸಂಜೆ 6 ಘಂಟೆಗೆ ತಲುಪಿದರು.

ನಂತರ 15ರ ಬೆಳಗ್ಗೆ ಗುರುಗಳು ಜುಲೈ 24ರ ಉತ್ಸವದ ತಾತ್ಕಾಲಿಕ ಧ್ಯಾನಮಂದಿರದ ಉದ್ಘಾಟನೆ ಮಾಡಿದರು. ಬೆಳಗ್ಗೆ 6:40ಕ್ಕೆ ಹೊಸದಾಗಿ ನಿರ್ಮಾಣವಾಗಿರುವ ವಿಶ್ರಾಂತಿ ಗೃಹದ ಉದ್ಘಾಟನೆ ಮಾಡಿದರು. ಆ ವಿಶಾಲವಾದ ಭವನದ ಸುತ್ತಲೂ ನಡೆದಾಡುತ್ತಾ ಉದ್ಘಾಟನೆಗಾಗಿ ವೇದಿಕೆ0ಯ ಹಿಂದೆ ಹಾಕಿದ್ದ ಬಾಬೂಜಿ0ಯವರ ಚಿತ್ರವನ್ನು ಪ್ರಶಂಸಿಸಿದರು. ಅವರು ಬೆಳಗ್ಗೆ 7 ಗಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟು,ಸತ್ಸಂಗಕ್ಕೆ ಬೇಗನೆ ಸಿದ್ಧರಾಗಬೇಕೆಂಬುದನ್ನು ನಮ್ಮೆಲ್ಲರಿಗೂ ಮತ್ತೊಮ್ಮೆ ನೆನಪಿಸಿದರು. ನಂತರ ಅವರು ವಿಶ್ರಾಂತಿ ಗೃಹಕ್ಕೆ 'ಅಮೈತಿ ನಿಲ0ಯ' (ಶಾಂತಿ0ಯ ನೆಲೆ) ಎಂದು ನಾಮಕರಣ ಮಾಡಿದರು. ಕೇರಳದಿಂದ ಬಂದಿದ್ದ ಸುಮಾರು 600 ಅಭ್ಯಾಸಿಗಳನ್ನೂ ಸೇರಿದಂತೆ, 3000ಕ್ಕೂ ಹೆಚ್ಚು ಅಭ್ಯಾಸಿಗಳು ಈ ಸುಸಂದರ್ಭದಲ್ಲಿ ಹಾಜರಿದ್ದರು.

ಸ್ವಲ್ಪ ವಿರಾಮದ ನಂತರ ಬಹಳ ಸಂತೋಷಭರಿತರಾಗಿ,ಹತ್ತಿರದ ಕೇಂದ್ರಗಳಿಗೆ ಭೇಟಿ ನೀಡುವುದರ ಬಗ್ಗೆ 0ಯೋಜನೆ ಪ್ರಕಟನೆ0ಯಾಗಬೇಕಾಗಿರುವ ತಮ್ಮ ಸಂದೇಶವನ್ನು ಬರೆದರು. ಗುರುಗಳು ಉಲ್ಲಾಸಭರಿತರಾಗಿ ನೀಡುವ ಮನೋಸ್ಥಿತಿ0ಯಲ್ಲಿದ್ದರು ಮತ್ತು ಈ ವ0ಯಸ್ಸಿನಲ್ಲಿ ಅವರು ತಮ್ಮ ಆರೋಗ್ಯ ಅಥವಾ ವೈ0ಯಕ್ತಿಕ ಅಗತ್ಯಗಳ ಬಗ್ಗೆ 0ಯಾವ ಕಾಳಜಿ0ಯನ್ನೂ ವಹಿಸದೆ,ಕೇವಲ ಪ್ರೇಮ ಮತ್ತು ನಿಸ್ವಾರ್ಥತೆಯಿಂದ ಎಲ್ಲರೊಡನೆ ಇದ್ದು ಕೆಲಸಮಾಡುವುದನ್ನು ನೋಡಿದಾಗ ನಮ್ಮೆಲ್ಲರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ.

ಸಂಜೆ ಗುರುಗಳು ಡಿ.ಜೆ ಪಾರ್ಕಿನ ಸುತ್ತಲೂ ಜುಲೈ ಉತ್ಸವಕ್ಕಾಗಿ ನಡೆ0ಯುತ್ತಿರುವ ಸಿದ್ಧತೆಗಳನ್ನು ನೋಡಲು ಹೋದರು.ಅವರು 'ಆರಾಮ್ ಡಾರ್ಮ್' ಅನ್ನು ನೋಡಿದರು ಮತ್ತು ಹೊಸ ವೈದ್ಯಕೀ0ಯ ಕೇಂದ್ರವನ್ನು ನಿರ್ಮಿಸಬೇಕೆಂದಿರುವ ಸ್ಥಳವನ್ನು ನೋಡಿದರು. ಆ ವೈದ್ಯಕೀ0ಯ ಕೇಂದ್ರದ ನಕಾಶೆ0ಯನ್ನು ಗುರುಗಳಿಗೆ ತೋರಿಸಿದರು.ಅವರು ಅದನ್ನು ಸಂತೋಷದಿಂದ ಸ್ವೀಕರಿಸಿ, "ಇದು ನನ್ನ ಬಳಿ ಇರಲಿ" ಎಂದರು. ನಂತರ ಅವರು ಸುಮಾರು 30 ನಿಮಿಷಗಳಿಗಿಂತಲೂ ಹೆಚ್ಚು ಸಮ0ಯ ನಿಶ್ಯಬ್ದವಾಗಿ ಕುಳಿತು ಕಾ0ಯುತ್ತಾ , ಒಂದು ಅತೀ ಆಳವಾದ, ತನ್ನಲ್ಲೇ ಐಕ್ಯಗೊಳಿಸುವಂತಹ ವಾತಾವರಣದಲ್ಲಿದ್ದ ಅಭ್ಯಾಸಿಗಳ ಗುಂಪಿಗೆ ಸಂಜೆ 5:30ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು.

16ರ ಬೆಳಗ್ಗೆ 7 ಗಂಟೆಗೆ ಗುರುಗಳು ಮಳಂಪುರ ಪುನಃಶ್ಚೇತನ ಕೇಂದ್ರದೆಡೆಗೆ ಹೊರಟರು. ಅವರು ಕುಟೀರವನ್ನು ಉದ್ಘಾಟಿಸಿದರು. ಉಪಾಹಾರ ಸ್ವೀಕರಿಸಿ,ಅಭ್ಯಾಸಿಗಳೊಡನೆ ಸುದೀರ್ಘವಾದ ಚರ್ಚೆ0ಯನ್ನು ನಡೆಸಿ ಸುಮಾರು 500 ಅಭ್ಯಾಸಿಗಳ ಗುಂಪು ಅವರಿಗಾಗಿ ಕಾ0ಯುತ್ತಿದ್ದಲ್ಲಿಗೆ ಹೋಗಿ ಸತ್ಸಂಗವನ್ನು ನಡೆಸಿಕೊಟ್ಟರು. ಮಧ್ಯಾಹ್ನ ಸುಮಾರು 12:45ಕ್ಕೆ ಕೊ0ಯಮತ್ತೂರಿಗೆ ಹೊರಟರು.

ನಾಚಿಪಾಳ0ಯಂ ಆಶ್ರಮವನ್ನು ತಲುಪಿ ಅಲ್ಲಿ ತಡವಾಗಿ ಮಧ್ಯಾಹ್ನದೂಟವನ್ನು ಮಾಡಿ ತುಸು ವಿಶ್ರಾಂತಿ0ಯನ್ನು ತೆಗೆದುಕೊಂಡರು. ನಂತರ ಅಲ್ಲಿ ನೆರೆದಿದ್ದ ಸುಮಾರು 600 ಅಭ್ಯಾಸಿಗಳಿಗೆ ಸಂಜೆ 4ಗಂಟೆಗೆ ಸತ್ಸಂಗವನ್ನು ನಡೆಸಿಕೊಟ್ಟರು. ಗುರುಗಳು ರಾತ್ರಿ ಸುಮಾರು 8:30ಕ್ಕೆ ತಿರುಪ್ಪೂರಿನ ಡಿ.ಜೆ ಪಾರ್ಕಿಗೆ ಹಿಂತಿರುಗಿದರು.

17ರಂದು ಗುರುಗಳು ತಿರುಪ್ಪೂರಿನಿಂದ ಸುಮಾರು 30 ಕಿ.ಮೀ ದೂರದಲ್ಲಿರುವ


ತಿರುಪ್ಪೂರ


ಕಾಂಗೇ0ಯಂ

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ


ದಿಂಡಿಗಲ್


ತಿರುಚ್ಚಿ

ಕಾಂಗೇ0ಯಂಗೆ ಭೇಟಿ ನೀಡಿದರು.ಈ ಚಿಕ್ಕ ಆಶ್ರಮದಲ್ಲಿ, ದೊಡ್ಡ ಸಂಖ್ಯೆ0ಯಲ್ಲಿ ನೆರೆದಿದ್ದ ಪ್ರೇಮಪೂರ್ಣ ಹೃದ0ಯಗಳೊಡನೆ ಗುರುಗಳು ಕುಟೀರ ಮತ್ತು ಧ್ಯಾನಮಂದಿರದ ಉದ್ಘಾಟನೆ ಮಾಡಿದರು. ಗುರುಗಳು ಕುಳಿತ ಬಳಿಕ ಅಭ್ಯಾಸಿಗಳು ಮಂದಿರದೊಳಗೆ ಪ್ರವೇಶಿಸಿದರು. ಅಲ್ಲಿ ಸೇರಿದ ಎಲ್ಲರೂ ನಿಶ್ಯಬ್ದವಾಗಿದ್ದರು. ಗುರುಗಳು ತಮಿಳಿನಲ್ಲಿ ಅಭ್ಯಾಸಿಗಳನ್ನು, "ಈ ನಿಶ್ಯಬ್ದತೆಗೆ ಕಾರಣವೇನು?" ಎಂದು ಕೇಳಿದರು. ಕೆಲವು ಕ್ಷಣಗಳ ನಂತರ ತಾವೇ "ಅದರರ್ಥ ಇಲ್ಲಿ ಪ್ರಗತಿ0ಯಾಗಿದೆ" ಎಂದು ಉತ್ತರಿಸಿದರು. ನೆರೆದಿದ್ದ ಸುಮಾರು 1700 ಅಭ್ಯಾಸಿಗಳಿಗೆ ಗುರುಗಳು ಸಂಜೆ 4.30 ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು. ನಂತರ ಸುಮಾರು 6.30 ರ ಹೊತ್ತಿಗೆ, ಡಿ.ಜೆ ಪಾರ್ಕಿಗೆ ಹಿಂತಿರುಗಿದರು.

18 ನೇ ಬೆಳಿಗ್ಗೆ ಡಿ.ಜೆ ಪಾರ್ಕ್‌ಅನ್ನು ಬಿಟ್ಟು 8.30ಕ್ಕೆ ದಿಂಡಿಗಲ್ ಆಶ್ರಮವನ್ನು ತಲುಪಿದರು. ಅಲ್ಲಿನ ಧ್ಯಾನ ಮಂದಿರವನ್ನು ಉದ್ಘಾಟಿಸಿ ಆ ಆಶ್ರಮಕ್ಕೆ 'ದ0ಯಾ ಆಶ್ರಮ' ಎಂದು ಹೆಸರಿಟ್ಟರು. ಉಪಾಹಾರದ ನಂತರ ಉದ್ಘಾಟನ ಸಮಾರಂಭಕ್ಕೆ ನೆರೆದಿದ್ದ 250 ಅಭ್ಯಾಸಿಗಳಿಗೆ ಸತ್ಸಂಗವನ್ನು ನೀಡಿದರು.

ಸುಮಾರು 11 ಗಂಟೆಗೆ ದಿಂಡಿಗಲ್ ಬಿಟ್ಟು ತಿರುಚ್ಚಿಗೆ ಹೊರಟರು. ಅವರ ಕಾರು ಮುಂದೆ ಹೊರಡುತ್ತಿದ್ದಂತೆ ಓರ್ವ ಆಭ್ಯಾಸಿ0ಯು ಗುರುಗಳಿಗೆ ಸೀಟಿನ ಪಟ್ಟಿ0ಯನ್ನು ಕಟ್ಟಿಕೊಳ್ಳುವದನ್ನು ನೆನಪಿಸಿದನು. ಗುರುಗಳು ಕುಚೇಷ್ಟೆಯಿಂದ ಅವನಿಗೆ "ನಿಮ್ಮ ಮುಖಗಳನ್ನು ನೋಡುತ್ತಾ ನಾನು ಸೀಟಿನ ಪಟ್ಟಿ0ಯನ್ನು ಕಟ್ಟಿಕೊಳ್ಳುವುದನ್ನ ಮರೆತಿದ್ದೆ" ಎಂದು ಹೇಳಿದರು. ಗುರುಗಳ ಈ ಮಾತು ಅಭ್ಯಾಸಿಗಳಿಗೆ ಸಂತೋಷ ಹಾಗು ಹಗುರತೆ0ಯನ್ನು ಅನುಭವಿಸುವಂತೆ ಮಾಡಿತು.

ಗುರುಗಳು ತಿರುಚ್ಚಿ0ಯನ್ನು ಶ್ರಮದಾ0ಯಕವಾದ ಪ್ರ0ಯಾಣದ ನಂತರ ಮಧ್ಯಾಹ್ನ 1 ಗಂಟೆಗೆ ತಲುಪಿದರು. ಅವರು ವಿಶ್ರಾಂತಿ ಪಡೆ0ಯಲು ಹಾಗು ಆಡಳಿತ ಕಾರ್ಯಗಳನ್ನು ಗಮನಿಸಲು ಕೆಲ ಸಮ0ಯ ವಿನಿ0ಯೋಗಿಸಿದರು. ಅವರು ಕೆಲವೊಮ್ಮೆ ಸಂಜೆ ವೇಳೆ0ಯಲ್ಲಿ ಬ0ಯಲಿನಲ್ಲಿ ಕುಳಿತು ಸಿನೆಮಾ ವೀಕ್ಷಿಸುತ್ತಿದ್ದರು. ಭಾನುವಾರದ ಸತ್ಸಂಗದಂದು ಆಶ್ರಮ ಭೇಟಿ ಮಾಡಿದರು. ಅಭ್ಯಾಸಿ0ಯೊಬ್ಬರು ಹೇಗೆ ತಮ್ಮ ಪ್ರಾರ್ಥನೆ0ಯು ಪವಾಡಸದೃಶವಾಗಿ ಉತ್ತರಿಸಲ್ಪಟ್ಟಿತು ಎಂಬುದನ್ನು ಕುರಿತು ಘಟನೆ0ಯೊಂದನ್ನು ವಿವರಿಸಿದರು. ಅದಕ್ಕೆ ಗುರುಗಳು, "0ಯಾರು ಪ್ರಾರ್ಥಿಸುತ್ತಿದ್ದಾರೆ ಎಂಬುದಕ್ಕಿಂತ ಪ್ರಾರ್ಥಿಸುತ್ತಿರುವ ವ್ಯಕ್ತಿ0ಯ ಪ್ರಾಮಾಣಿಕತೆ ಮುಖ್ಯವಾಗುತ್ತದೆ" ಎಂದು ಹೇಳಿದರು. ಮಕ್ಕಳು ಸತ್ಸಂಗದ ನಂತರ ಪುಟ್ಟದಾದ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸಿದರು. ಗುರುಗಳು 23 ರ ಬೆಳಗಿನ 11 ಗಂಟೆ0ಯ ವಿಮಾನದಲ್ಲಿ ಚೆನ್ನೈಗೆ ಹೊರಟರು.

## ಒಮೇಗಾದ ಮಕ್ಕಳೊಂದಿಗೆ ಸತ್ಸೋಲ್

ಗುರುಗಳು ಮೇ ತಿಂಗಳು 27 ರಂದು ದೆಹಲಿ ತಲುಪಿದರು. ಲಾಲಾಜಿ ಮೆಮೋರಿ0ಯಲ್ ಒಮೇಗಾ ಅಂತರಾಷ್ಟ್ರೀ0ಯ ಶಾಲೆ0ಯ 12 ತರಗತಿ0ಯಲ್ಲಿ ಉತ್ತೀರ್ಣರಾದ ಮೊದಲನೆ0ಯ ತಂಡದ ವಿದ್ಯಾರ್ಥಿಗಳಿಗೆ ಗುರುಗಳೊಡನೆ ಸತ್ಸೋಲ್‌ಗೆ ಪ್ರ0ಯಾಣ ಮಾಡುವ ಅವಕಾಶ ದೊರೆತಿತ್ತು. ಈ ಪ್ರವಾಸಕ್ಕೆ ಸಹಿ ಹಾಕಿದ ಎಲ್ಲಾ ವಿದ್ಯಾರ್ಥಿಗಳೂ ಅರ್.ಕೆ.ಪುರಂ ಆಶ್ರಮವನ್ನು ಮೇ 28 ರಂದು ತಲುಪಿದರು. ಗುರುಗಳು ದೆಹಲಿ ಆಶ್ರಮಕ್ಕಾಗಿ ಪ್ರಸ್ತಾಪಿಸಲಾದ ಜಮೀನನ್ನು ನೋಡಿಕೊಂಡು ಬಂದರು.

ಮರುದಿನ ಭಾನುವಾರ ವಿದ್ಯಾರ್ಥಿಗಳು ಗುರಗಾಂವ್ ಆಶ್ರಮದಲ್ಲಿ ಗುರುಗಳು ನೀಡಿದ ಸತ್ಸಂಗದಲ್ಲಿ ಭಾಗವಹಿಸಿದರು. ಸತ್ಸಂಗದ ನಂತರ ಅಭ್ಯಾಸಿಗಳು ಒಂದು ಕಿಸೆ ಅಳತೆ0ಯ ಅಭ್ಯಾಸಿ0ಯ ದಿನಚರಿ ಪುಸ್ತಕ, ಒಂದು ಪೆನ್ನನ್ನು ತಮ್ಮ ಪ್ರೀತಿ0ಯ ಗುರುತಾಗಿ ಆ ವಿದ್ಯಾರ್ಥಿಗಳಿಗೆ ಬಹುಮಾನವಾಗಿ ನೀಡಿದರು. ನಂತರ ಆ ಸಂಜೆ ಗುರುಗಳು ಒಂದು ಆಶ್ಚರ್ಯದ ಭೇಟಿ0ಯನ್ನು ಆರ್.ಕೆ.ಪುರಂ ಆಶ್ರಮಕ್ಕೆ ನೀಡಿ ಆ ವಿದ್ಯಾರ್ಥಿಗಳನ್ನು ಸಂಧಿಸಿ ಅವರಿಗೆ ಅಲ್ಲಿಯೇ ಒಂದು ಸತ್ಸಂಗವನ್ನು ನಡೆಸಿಕೊಟ್ಟರು.

ಗುರುಗಳು ಸೋಮವಾರ ಮೇ 30 ರಂದು ಸುಮಾರು 7 ಗಂಟೆಗೆ ಮೊರಾದಾಬಾದ್‌ಗೆ ಹೊರಟು ಅಲ್ಲಿಗೆ 11 ಗಂಟೆಗೆ ತಲುಪಿದರು. ವಿದ್ಯಾರ್ಥಿಗಳು ಮೊರಾದಾಬಾದನ್ನು ಗುರುಗಳು ತಲುಪಿದ ನಂತರ ತಡವಾಗಿ ತಲುಪಿದರು. ಮತ್ತು ಗುರುಗಳು ಅವರ ಬರುವಿಕೆಗಾಗಿ ಕಾತುರತೆಯಿಂದ ಕಾಯುತ್ತಿದ್ದರು. ವಿದ್ಯಾರ್ಥಿಗಳು ಬರುತ್ತಿದ್ದಂತೆ0ಯೇ ಗುರುಗಳು ತಮ್ಮ ಕೊಠಡಿಯಿಂದ ಹೊರಗೆ ಬಂದು ಅವರನ್ನು ಸ್ವಾಗತಿಸಿದರು. ಅದಾದ ನಂತರವೇ ಅವರು ತಮ್ಮ ಮಧ್ಯಾಹ್ನದ ಊಟವನ್ನು ಮುಗಿಸಿ ಮಲಗಿದರು.

ಗುರುಗಳು ಮಧ್ಯಾಹ್ನ 3 ಗಂಟೆ ಸುಮಾರಿಗೆ ರುದ್ರಪುರಕ್ಕೆ ಹೊರಟು ಸಂಜೆ 6.45ಕ್ಕೆ ತಲುಪಿದರು. ಬೆಳಗ್ಗೆ 9 ಗಂಟೆಗೆ ಬೈಠಕ್ ನೀಡಿದರು. ಅವರು ವಿದ್ಯಾರ್ಥಿಗಳೊಂದಿಗೆ ಮಧ್ಯಾಹ್ನದ ಊಟವನ್ನು ಎಲ್ಲರಿಗೂ ಊಟ ನೀಡುತ್ತಿದ್ದ ಧಾನ್ಯಾಗಾರದಲ್ಲಿ ಮಾಡುವುದಾಗಿ ನಿರ್ಧರಿಸಿದರು. ಅವರು ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತ ಕಾಲ ಕಳೆದರು. ಓರ್ವ ಸಹೋದರನು ಆಧ್ಯಾತ್ಮಿಕ ಹಾಗು ಲೌಕಿಕ ಕೆಲಸಗಳನ್ನು ಹೇಗೆ ವಿಂಗಡಿಸಿ ವ್ಯತ್ಯಾಸ ಕಾಣುವುದು ಎಂಬ ಪ್ರಶ್ನೆ0ಯನ್ನು ಕೇಳಿದಾಗ ಗುರುಗಳು ಕೆಲಸವು ಕೆಲಸ ಅದನ್ನು ಆಧ್ಯಾತ್ಮಿಕ ಮತ್ತು ಲೌಕಿಕ ಎಂದು ಬೇರೆ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಸ್ನಾನ ಗೃಹವನ್ನು ಶುದ್ಧ ಪಡಿಸಬೇಕಾದರೆ ಅದನ್ನು ಶುದ್ಧ ಪಡಿಸುವ ಅಗತ್ಯವಿದ್ದಲ್ಲಿ ಅದನ್ನು ಮಾಡಬೇಕು ಎಂದರು. ನಂತರ ಅವರು ನಾವೆಲ್ಲರೂ ಒಂದು ನೀಳ ಚೌಕದ ಪ್ರತಿ0ಯೊಂದು ಶಿರ ಕೋನಗಳ ನಾಲ್ಕು ಶಕ್ತಿಗಳ ಪ್ರಭಾವದಿಂದ ಹಿಡಿದಿಟ್ಟಿರುತ್ತೇವೆ. ಈ ಶಕ್ತಿಗಳೇ ಸಂಸಾರ, ಸಮಾಜ,ಮತಧರ್ಮ ಮತ್ತು ಆಸೆಗಳು. ನಾವು ಮಧ್ಯದಲ್ಲಿ ಸಿಕ್ಕಿ ಹಾಕಿಕೊಂಡು ಈ ಎಲ್ಲಾ ಶಕ್ತಿಗಳಿಂದ ಎಲ್ಲೆಡೆಗೆ


ದೆಹಲಿ


ಮೊರಾದಾಬಾದ್


ರುದ್ರಪುರ

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ


ಸತ್ಖೋಲ್

ಎಳೆ0ುಲ್ಪಡುತ್ತಿದ್ದೇವೆ. ನಾವು ಈ ಒಂದೊಂದು ಶಕ್ತಿಯಿಂದ ಬಿಡಿಸಿಕೊಂಡು ಹೊರ ಬರುತ್ತಿದ್ದಂತೆ ಈ ಶಕ್ತಿಗಳಿಂದ ಬಿಡುಗಡೆ ಹೊಂದುತ್ತೇವೆ ಎಂದರು. ನಂತರ ಅವರು ತಮ್ಮ ಕೊಠಡಿಗೆ ವಿಶ್ರಾಂತಿಗೆ ತೆರಳಿದರು.

## ಸತ್ಖೋಲ್

ಜೂನ್ 1 ನೇ ತಾರೀಖು ಗುರುಗಳು ಬೆಳಗ್ಗೆ 7 ಗಂಟೆಗೆ ಸತ್ಸಂಗವನ್ನು ನಡೆಸಿ ಅದಾದ ನಂತರ 10 ಗಂಟೆಗೆ ಹೊರಟು ಮಧ್ಯಾಹ್ನ ಸತ್ಖೋಲ್ ತಲುಪಿದರು ವಾತಾವರಣವು ಹಿತಕರವಾಗಿ ಪ್ರಶಾಂತವಾಗಿ ಇತ್ತು. ಗುರುಗಳು ಅಭ್ಯಾಸಿಗಳೊಡನೆ ಹೊರಗಡೆ ಕುಳಿತು ಪ್ರಶ್ನೆಗಳಿಗೆ ಉತ್ತರಿಸಿದರು. ಅವರು ಈ ಪ್ರಪಂಚವು ಇರುವುದು ನಮ್ಮ ಸುಖಾನುಭೋಗಕ್ಕಾಗಿ ಅಲ್ಲ, ನಮಗೆ ಈ ಪಂಚೇಂದ್ರಿ0ುಗಳನ್ನು ಅಥವಾ ಗ್ರಹಣಶಕ್ತಿ0ುನ್ನು ನೀಡಿರುವುದು ಅವುಗಳನ್ನು ಉಪ0ೋಗಿಸಿ ಸಮಾಚಾರಗಳನ್ನು ತಿಳಿದುಕೊಳ್ಳಲೆಂದು. ಅದಕ್ಕೆ ಬದಲಾಗಿ ನಾವು ಅದನ್ನು ಸುಖಾನುಭವಕ್ಕೆ ಉಪ0ೋಗಿಸುತ್ತೇವೆ. ದೇವರು ನಮಗೆ ಬುದ್ಧಿ0ುನ್ನು ಕೊಟ್ಟಿರುವುದು ಸರಿ0ಾದ ಮಾರ್ಗವನ್ನು ತೋರಿಸಲು ಹಾಗು ಆ ಸರಿ0ಾದ ಮಾರ್ಗದಲ್ಲಿ ನಡೆ0ುುವ ಇಚ್ಛಾಶಕ್ತಿ0ುನ್ನು ನೀಡಲು ಹೃದ0ುವನ್ನು ಕೊಟ್ಟಿದ್ದಾನೆ.

ಬಹುತೇಕವಾಗಿ ಪ್ರತಿದಿನವೂ ಅವರು ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ ಹಾಸ್ಯ ಚಟಾಕಿಗಳನ್ನು ಸಿಡಿಸಿದರು. ಅದೆಲ್ಲಕ್ಕಿಂತ ಹೆಚ್ಚಾಗಿ ಅವರು ಆಧ್ಯಾತ್ಮಿಕ ಪ್ರಚೋದನೆ0ುನ್ನು ನೀಡಿದ್ದು ಎಲ್ಲರ ಮನ ಮುಟ್ಟಿತು.

ಒಮೆಗಾ ಶಾಲೆ0ು ಮಕ್ಕಳಿಗೆ 'ಒಮೆಗಾದಿಂದ ಪ್ರೀತಿಯೊಡನೆ' ಎಂಬ ಶಿರೋನಾಮೆಯಿದ್ದ ಸ್ಮರಣಿಕೆ0ುನ್ನು ನೀಡಲಾಯಿತು. ಅದು ಸಿ.ಡಿ 0ೊಂದಿಗೆ ಸಣ್ಣ ಪುಸ್ತಕವೊಂದನ್ನು ಹಾಗು ಗುರುಗಳ ಕೈಯಿಂದ ಬರೆದ ಸಂದೇಶವನ್ನು ಹೊಂದಿತ್ತು. "ಇತರರು ನಿಮಗೆ ಏನು ಹೇಳುವರು ಅದರ ಆಧಾರದ ಮೇಲೆ ನಿಮ್ಮನ್ನು ನಿರ್ಣಯಿಸಬೇಡಿರಿ, ಬೇರೆ0ುವರನ್ನು ನಿಮ್ಮ ಕನ್ನಡಿ0ಾಗಿ ಮಾಡಿಕೊಳ್ಳದಿರಿ. ನಾನೇನಾಗಿರುವೆನೋ ಅದೇ ನಾನು ಮತ್ತು ನಾನೇನಾಗಬೇಕಾಗಿದೆ0ೋ ಅದು ನಾನಾಗಬೇಕು. ಸಹಜಮಾರ್ಗವು ನಾನೇನಾಗಿರುವೆನೋ ಅಲ್ಲಿಂದ ನಾನೇನಾಗಬೇಕಾಗಿದೆ0ೋ ಅದಾಗುವ ನಡುವಿನ ಪ0ುಣವಾಗಿದೆ." ಎಂದು ತಮ್ಮ ಈ ಪ್ರ0ಾಣದ ಕೊನೆ0ು ದಿನ ಗುರುಗಳು ವಿಧ್ಯಾರ್ಥಿಗಳನ್ನು ಕುರಿತು ಹೇಳಿದರು.

4 ರ ಮಧ್ಯಾಹ್ನ ಗುರುಗಳು ರುದ್ರಾಪುರಕ್ಕೆ ಹೊರಟು ಮಾರ್ಗದಲ್ಲಿ ಹಲ್ದ್ವಾನಿ ಆಶ್ರಮದಲ್ಲಿ ಸ್ವಲ್ಪ ಕಾಲ ತಂಗಿದ್ದರು.

5 ರಂದು ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟ ನಂತರ ಮೊರಾದಾಬಾದ್‌ಗೆ ಹೊರಟರು. ಆ ರಾತ್ರಿ ಅವರು ಅಲ್ಲಿ0ೇ ಉಳಿದು 6 ರ ಬೆಳಗಿನ ಧ್ಯಾನ ಮತ್ತು ಉಪಹಾರದ ನಂತರ ಹೊರಟು ದೆಹಲಿ ಆಶ್ರಮವನ್ನು ಮಧ್ಯಾಹ್ನ 3 ಗಂಟೆಗೆ ತಲುಪುವುದರೊಂದಿಗೆ ತಮ್ಮ ಪ್ರವಾಸವನ್ನು ಅಲ್ಲಿಗೇ ಮುಗಿಸಿದರು.

## ಸಿಂಗಾಪೂರ್

ಜೂನ್ 16ರ ರಾತ್ರಿ ಗುರುಗಳು ಸಿಂಗಾಪೂರ್ ತಲುಪಿದರು. ಅವರು ಸಹೋದರ ನಿತಿನ್ ಗೋವಿಲ್‌ರವರ ನಿವಾಸದಲ್ಲಿ ತಂಗಿದ್ದರು. ಸ್ಥಳಾವಕಾಶವಾಗದ ಕಾರಣ ಸತ್ಸಂಗವನ್ನು ಬೆಳಗ್ಗೆ ಹೊರದೇಶದ ಅಭ್ಯಾಸಿಗಳಿಗೆ ಮತ್ತು ಸಂಜೆ ಸ್ಥಳೀ0ು ಅಭ್ಯಾಸಿಗಳಿಗೆ ಪ್ರತ್ಯೇಕವಾಗಿ ನಡೆಸಲಾಯಿತು. ಇವೆರಡರ ನಡುವಿನ ಅವಧಿ0ುಲ್ಲಿ ಅಭ್ಯಾಸಿಗಳು ಇತರರೊಂದಿಗೆ ಬೆರೆ0ುುತ್ತಾ ಎಲ್ಲರೊಂದಿಗೆ ಗುರುಗಳಿಗಾಗಿ ಕಾ0ುುತ್ತಿದ್ದರು. ನಡೆದ ಬಹುತೇಕ ಸತ್ಸಂಗಗಳನ್ನು ಗುರುಗಳೇ ನಡೆಸಿಕೊಟ್ಟರು. ದಿನಾಂಕ 19 ಭಾನುವಾರದಂದು ಗುರುಗಳನ್ನು ಸ್ವಾಗತಿಸಲು ಎಲ್ಲಾ ಅಭ್ಯಾಸಿಗಳೂ ಸಿಂಗಪೂರ್ ಧ್ಯಾನ ಕೇಂದ್ರದಲ್ಲಿ ಒಟ್ಟುಗೂಡಿದ್ದರು. ಗುರುಗಳು ಸತ್ಸಂಗ ನಡೆಸಿಕೊಟ್ಟ ನಂತರ ಸಾಲಾಗಿ ನಿಂತಿದ್ದ ಅಭ್ಯಾಸಿಗಳೆಡೆಗೆ ನಿಧಾನವಾಗಿ ನಡೆ0ುುತ್ತಾ ನಗುನಗುತ್ತಾ, ಕೆಲವರಿಗೆ ಬೆನ್ನನ್ನು ತಟ್ಟುತ್ತಾ, ಮಕ್ಕಳಿಗೆ ವಿಶೇಷವಾಗಿ ಆಶೀರ್ವದಿಸುತ್ತಾ, ಎಲ್ಲರನ್ನು ಬಹಳ ಪ್ರೀತಿಯಿಂದ ಅಭಿನಂದಿಸಿದರು. ಅವರಲ್ಲಿ ಅಸಾಮಾನ್ಯವಾದ ಶಾಂತತೆ ಮತ್ತು ತೇಜಸ್ಸು ತುಂಬಿತ್ತು. ಅದು ಹೇಗಿತ್ತೆಂದರೆ ದೀಪಜ್ವಾಲಕವು ಚಲಿಸುತ್ತಾ ಪ್ರತಿ0ೊಂದು ಹೃದ0ುವನ್ನು ಸ್ಪರ್ಶಿಸುತ್ತಾ ಬೆಳಗಿದಂತಿತ್ತು. ನಂತರ ಅವರು ಅಲ್ಲೇ ಹತ್ತಿರವಿದ್ದ ಆಧುನಿಕ ಸಿಂಗಾಪೂರ್‌ನ ಮರಿ0ಾ ಬೇ ಸ್ಯಾಂಡ್ಸ್‌ನಲ್ಲಿರುವ ಅದ್ಭುತವಾದ ವಾಸ್ತುಶಿಲ್ಪವನ್ನು ನೋಡಲು ಹೋದರು.

ಸೋಮವಾರ ಸಂಜೆ ಗುರುಗಳು ಪ್ರಶಿಕ್ಷಕರಿಗಾಗಿ ಸತ್ಸಂಗವನ್ನು ನಡೆಸಿಕೊಟ್ಟರು ಹಾಗೂ ಅಲ್ಲಿ ನೆರೆದಿದ್ದ ಎಲ್ಲಾ ಅಭ್ಯಾಸಿಗಳನ್ನು ಕುರಿತು ಸುಮಾರು 30 ನಿಮಿಷಗಳ ಕಾಲ ಮಾತನಾಡಿದರು.ಅವರ ಅನೌಪಚಾರಿಕ ಸಂಭಾಷಣೆಯಿಂದ ಆಯ್ದ ಕೆಲವು ವಿಷ0ುಗಳು ಹೀಗಿವೆ.

- 0ಾರೋ ಬಾಬೂಜಿ0ುವರನ್ನು ನೀವು ಭೌತಿಕ ಜೀವನದಲ್ಲಿ ಸಮೃದ್ಧಿ ಹೊಂದುವುದರ ವಿರೋಧಿ0ೇ? ಎಂದು ಕೇಳಿದ್ದಕ್ಕೆ ಬಾಬೂಜಿ ಮಹಾರಾಜರು ನಾನು ಅದರ ವಿರೋಧಿ0ುಲ್ಲ.ಹಣ ಸಂಪಾದನೆ0ು ನಿಮ್ಮ ಸಾಮರ್ಥ್ಯವನ್ನು ಅವಲಂಬಿಸಿದೆ. ಆದರೆ ನದಿ0ುಂತೆ ಹಣವೂ ಸಹ ಹರಿ0ುಬೇಕು. ನಿಮಗೆಷ್ಟು ಬೇಕೋ ಅಷ್ಟನ್ನು ತೆಗೆದುಕೊಳ್ಳಿ, ಉಳಿದದ್ದನ್ನು ಹರಿ0ುಲು ಬಿಡಿ.
- ಜೀವನದಲ್ಲಿ ಸಮತೋಲನವನ್ನು, ಜೀವನದ ಗುಣಮಟ್ಟದಲ್ಲಿ ಅಭಿವೃದ್ಧಿ, ಜೀವನದಲ್ಲಿ ಮೌಲ್ಯಗಳ ವರ್ಧನೆ, ವಸ್ತುಗಳ ಬಗೆಗೆ ನನ್ನದಲ್ಲ ಎನ್ನುವ ಭಾವನೆ0ುನ್ನು ಬೆಳೆಸಿಕೊಳ್ಳುವುದು, ಆದರೆ ನಾನೇನಾಗಬೇಕಾಗಿದೆ0ೋ ಅದಾಗುವುದರಲ್ಲೇ ಸಹಜ ಮಾರ್ಗದ ಸಾರವಿದೆ.
- ಪ್ರೇಮದಿಂದ ಶಿಸ್ತು ಹುಟ್ಟಬೇಕು. ಸಹಜ ಮಾರ್ಗದ ವಿಶೇಷತೆ0ೆಂದರೆ ಧ್ಯಾನದಿಂದ ಗುರುಗಳ ಬಗೆಗೆ ನಮ್ಮ ಹೃದ0ುಗಳಲ್ಲಿ ಪ್ರೇಮವುಂಟಾಗುತ್ತದೆ. ಅದು ಇನ್ನೂ ಹೆಚ್ಚಾಗುತ್ತಾ ನಮ್ಮನ್ನು ಶಿಸ್ತುಗೊಳಿಸಬೇಕು.
- ಪ್ರತಿ0ೊಂದು ಸಸಿ0ುೂ ಅದರದೇ ಆದ ವೇಗದಲ್ಲಿ ಬೆಳೆ0ುುತ್ತದೆ. ನೀವು ಎಲ್ಲವೂ ಒಟ್ಟಿಗೆ ಸಮನಾಗಿ ಬೆಳೆ0ುಬೇಕೆಂದು ಹೇಳಲಾಗುವುದಿಲ್ಲ. ಪ್ರವಾಹದಲ್ಲಿನ ನೀರು ಮಾತ್ರ ಒಂದೇ ಸಮನಾಗಿ ಮೇಲೇರುತ್ತದೆ ಮತ್ತು ಅದು ವಿನಾಶಕಾರಿ. ಪ್ರೇಮವು ತನ್ನಷ್ಟಕ್ಕೆ ತಾನೇ ಬೆಳೆ0ುಬೇಕು, ಅದನ್ನು ನಾವು 0ಾರಲ್ಲಿ0ುೂ ಬಲವಂತವಾಗಿ ಬೆಳೆಸಲಾಗುವುದಿಲ್ಲ.

22ರ ಮಧ್ಯಾಹ್ನ ಮಲೇಶಿ0ಾ ಆಶ್ರಮದ ಹಾಗೂ ಏಶಿ0ಾದ ಸಮ್ಮೇಳನದ ಉದ್ಘಾಟನೆಗಾಗಿ ಗುರುಗಳು ಮಲೇಶಿ0ಾಗೆ ತೆರಳಿದರು.


ಸತ್ಖೋಲ್‌ನಲ್ಲಿ ಗುರುಗಳೊಂದಿಗೆ LMOIS ಮಕ್ಕಳು



ಸಿಂಗಾಪೂರ್

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಜುಲೈ 24ರ ಉತ್ಸವಕ್ಕೆ ಪೂರ್ವಸಿದ್ಧತೆ

## ಸಹಜಮಾರ್ಗದ ಭಂಡಾರಗಳಲ್ಲಿರುವ ರಹಸ್ಯ

ಹಿಂದೆ ಶಾಹಜಹಾನಪುರದಲ್ಲಿ ಬಾಬೂಜಿಯವರ ನಿವಾಸದಲ್ಲಿ ನಿರಾಡಂಬರವಾಗಿ ನಡೆಯುತ್ತಿದ್ದ 30 ಅಭ್ಯಾಸಿಗಳನ್ನು ಒಗ್ಗೂಡಿಸುತ್ತಿದ್ದ ಭಂಡಾರವನ್ನು ಗುರುಗಳು ಆಗಾಗ್ಗೆ ನಮಗೆಲ್ಲರಿಗೂ ನೆನಪಿಸುತ್ತಿರುತ್ತಾರೆ. ಭಾಗವಹಿಸುವ ಅಭ್ಯಾಸಿಗಳ ಸಂಖ್ಯೆಯು ಈಗ ತಿರುಪ್ಪೂರಿನ ಡೈಮಂಡ್ ಜ್ಯೂಬಿಲಿ ಪಾರ್ಕಿನಂತಹ ಸ್ಥಳಗಳಲ್ಲಿ ಐವತ್ತು ಸಾವಿರಕ್ಕೆ ಏರಿದೆ. ಇದು ನಮ್ಮ ಗುರುಗಳ ಅಪಾರವಾದ ಪ್ರಯತ್ನವು ಕಾರ್ಯರೂಪಕ್ಕೆ ಬಂದಿರುವುದರ ಸ್ಪಷ್ಟವಾದ ಸಾಕ್ಷಿಯಾಗಿದೆ.

2006 ರ ಜುಲೈ 24ರಂದು ರಾಯಪುರದಲ್ಲಿ ನೀಡಿದ ಭಾಷಣದಲ್ಲಿ ಗುರುಗಳು ಭಂಡಾರಗಳ ಆಧ್ಯಾತ್ಮಿಕ ಉದ್ದೇಶದ ಬಗ್ಗೆ ಅರಿವನ್ನುಂಟುಮಾಡಿದರು ಮತ್ತು ಈ ಕೆಳಗಿನ ವಿಷಯಗಳನ್ನು ಹೇಳಿದರು.

- ಇಲ್ಲಿ ಸಂಭ್ರಮದ ವಾತಾವರಣವಿದ್ದರೂ ಇವು ಹಬ್ಬಗಳಲ್ಲ. ಈ ಸಮಾರಂಭಗಳು ಸಂತೋಷದ ಆಸ್ವಾದನೆಗಾಗಿ ಅಲ್ಲ. ಅದರೆ,ಇಂತಹ ಅದ್ಭುತ ಆಧ್ಯಾತ್ಮ ಕೃಪಾಭರಿತ ವಾತಾವರಣದಲ್ಲಿ ಉಂಟಾಗುವ ನಮ್ಮೊಳಗಿನ ಆಂತರಿಕ ಆನಂದಾನುಭವವನ್ನು ಮಾತ್ರ ಆಸ್ವಾದಿಸಲು ಅನುಮತಿ ಇರುತ್ತದೆ. ಆಂದರೆ, ನಮ್ಮಲ್ಲಿ ಪ್ರತಿಯೋರ್ವರೂ ಈ ವಿಶೇಷ ಸಂದರ್ಭಗಳಲ್ಲಿ ಭಾಗಿಗಳಾಗುವ ಕಾಲವೆಷ್ಟಾದರೂ ಸರಿ, ಆ ಸಂಪೂರ್ಣ ಸಮಯವನ್ನು ತಮ್ಮ ಆಧ್ಯಾತ್ಮಿಕ ಉನ್ನತಿಗಾಗಿ ಮಹಾನ್ ಗುರುಗಳ ಸಂಪೂರ್ಣ ಸ್ಮರಣೆಯಲ್ಲಿಯೇ ಕಳೆಯತಕ್ಕದ್ದು.

- ವ್ಯಕ್ತಿನಿಷ್ಠೆ, ಗುರಿ –ಈ ವಾಸ್ತವ ದೃಶ್ಯಗಳಿಂದ ಗಮನ ತಪ್ಪುವುದರ ಏಕೈಕ ಅರ್ಥವೆಂದರೆ, ನಾವು ಕಾಲವೆಂಬ ಸಂಪನ್ಮೂಲದ ಮಹತ್ವವನ್ನರಿಯದೆ ವೃಥಾ ಹರಣಮಾಡುತ್ತಾಅನಗತ್ಯವಾದ ಅನ್ವೇಷಣೆಯಲ್ಲಿ ಅಪವ್ಯಯಿಸುತ್ತಿದ್ದೇವೆ ಎಂದಾಗುತ್ತದೆ. ನನಗೂ ಸಮೋಸ ಇಷ್ಟವಾದುದು. ಆದರೆ ಭಾಷಣಗಳು ಆಗುತ್ತಿದ್ದರೂ ಸಮೋಸಗಳು ಮುಗಿದು ಹೋಗುತ್ತವೆ ಎಂಬ ಭಯದಿಂದ ನಾವು ಕ್ಯಾಂಟೀನಿನಲ್ಲಿ ಗುಂಪುಗೂಡಬಾರದು.

- ನಿಮ್ಮ ಏಕಾಗ್ರಚಿತ್ತದ ಧ್ಯಾನದ ಅವಧಿಯಲ್ಲಿಯೂ ಮತ್ತು ನಮ್ಮ ಸೋದರ ಮತ್ತು ಸೋದರಿಯರು ನೀಡಿರುವ ಭಾಷಣ ಹಾಗೂ ಅಮೋಘ ಸಂಗೀತವನ್ನು ಆಲಿಸುತ್ತಿರುವಾಗ ,ಅಗತ್ಯವಿರುವ ತಲ್ಲೀನತೆಯುಳ್ಳ ಏಕಾಗ್ರತೆಯಿಂದ ನಮ್ಮ ಆತ್ಮಗಳು ನರ್ತಿಸಬೇಕು, ಶರೀರಗಳಲ್ಲ.

- ಪ್ರೇಮ ಹಾಗೂ ಭಕ್ತಿಯಂತಹ ಭಾವನೆಗಳನ್ನು ನಮ್ಮೊಳಗೆ ಪ್ರಚೋದಿಸುವುದಕ್ಕಾಗಿಯೇ ಇರುವಂತಹ ಭಜನೆಗಳು ಅತಿ ತನ್ಮಯರಾಗಿ ಏಕಾಗ್ರತೆಯಿಂದ ಕುಳಿತಿರುವಾಗಲೂ ಸಹ ನಮ್ಮ ಮೇಲೆ ಕೃಪೆ ಸುರಿಯಬಲ್ಲ ಶಕ್ತಿ ಹೊಂದಿವೆ.

- ಮತ್ತೊಂದು ಸಂದೇಶದಲ್ಲಿ ಬಾಬೂಜಿಯವರು ಆನಂದವಿಲ್ಲದೆ ಆಧ್ಯಾತ್ಮಿಕತೆ ಇಲ್ಲ ಎಂದಿದ್ದಾರೆ. ಆದರೆ ಅದನ್ನು ಬಾಹ್ಯವಾಗಿ ಅಭಿವ್ಯಕ್ತಗೊಳಿಸಬಾರದು. ಅದು ಅಂತರಂಗದಲ್ಲಿಯೇ ಇರಬೇಕು ಆಂತರ್ಯದ ಆನಂದ,ಆತ್ಮ ಚೇತನದ ಅಂತಃಚಿಲುಮೆ ಇದು ನಮ್ಮನ್ನು ತಾತ್ಕಾಲಿಕವಾಗಿಯಾದರೂ, ದಿವ್ಯ ಲೋಕವೆನ್ನಲಾಗುವ ಅವ್ಯಕ್ತ,ಅದೃಶ್ಯ ಲೋಕಕ್ಕೆ ಕರೆದೊಯ್ಯಬೇಕು.

- ಈ ಸಂದರ್ಭಗಳನ್ನು ಕೇವಲ ವಿವೇಕದಿಂದಷ್ಟೇ ಅಲ್ಲ, ಕೇವಲ ಎಚ್ಚರಿಕೆಯಿಂದಷ್ಟೇ ಅಲ್ಲ, ಸಂಪೂರ್ಣವಾಗಿ ನಿಮ್ಮ ಆತ್ಮ,ಶರೀರ ಮತ್ತು ಮನಸ್ಸು ಈ ಎಲ್ಲವನ್ನೂ ನಮ್ಮನ್ನು ಈ ಅಸ್ತಿತ್ವಕ್ಕೆ ಮಾರ್ಗದರ್ಶಿಸುತ್ತಿರುವ ಮಹಾನ್ ಗುರುಗಳಲ್ಲಿ ಸಮಗ್ರವಾಗಿ ಕೇಂದ್ರೀಕರಿಸಬೇಕೆಂದು ನಿಮ್ಮನ್ನು ನಾನು ಆಗ್ರಹಪಡಿಸುತ್ತೇನೆ.

http://www.sahajmarg.org/literature/online/speeches/the-real-purpose-of-bhandaras




ತಿರುಪ್ಪೂರಿನ ಡೈಮಂಡ್ ಜ್ಯೂಬಿಲಿ ಪಾರ್ಕಿನಲ್ಲಿ ಗುರುಗಳ ಜನ್ಮದಿನೋತ್ಸವಕ್ಕಾಗಿ ಪೂರ್ವಸಿದ್ಧತೆಗಳು ಭರದಿಂದ ಸಾಗುತ್ತಿವೆ. ಧ್ಯಾನ ಮಂದಿರ,ಅಭ್ಯಾಸಿಗಳು ವಾಸ್ತವ್ಯಕ್ಕೆ ಟೆಂಟುಗಳು,ಕ್ಯಾಂಟೀನ್ ಪ್ರದೇಶ ಹಾಗೂ ಇತರ ಸೌಲಭ್ಯಗಳ ಸಿದ್ಧತೆಗಳು ಪ್ರಗತಿಯಲ್ಲಿದೆ. ನೀರು ದುರ್ಲಭವಾದ ಸಂಪನ್ಮೂಲವಾಗಿದ್ದು, ಅದರ ವ್ಯವಸ್ಥೆಯು ಮೊದಲಿನಿಂದಲೂ ಒಂದು ಸವಾಲಾಗಿದೆ. ನೀರು ಸರಬರಾಜು ಹಾಗೂ ಶೌಚಾಲಯಗಳ ವ್ಯವಸ್ಥೆಯ ಪರಿಶೀಲನೆ ಮುಗಿದಿದೆ. ಉತ್ಸವಕ್ಕೆ ವಿದ್ಯುತ್ ಸರಬರಾಜಿನ ವ್ಯವಸ್ಥೆ ಹಾಗೂ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನೂ ಮಾಡಲಾಗಿದೆ. ಅಲ್ಲಿನ ಸ್ವಯಂಸೇವಕರು ಸಂತೋಷದಿಂದಿದ್ದರೂ ಗುರುಗಳು ಮತ್ತು ಅಭ್ಯಾಸಿಗಳೆಲ್ಲರೂ ಭಂಡಾರಕ್ಕಾಗಿ ಸೇರುವುದರೊಳಗೆ ಇಡೀ ಪ್ರದೇಶವು ಹೇಗೆ ತಯಾರಾಗುವುದೆಂದು ಆತಂಕಗೊಂಡಿದ್ದಾರೆ. ಪ್ರತಿಯೊಬ್ಬರೂ ಭಂಡಾರದಲ್ಲಿ ಭಾಗವಹಿಸಲು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು ಹಾಗೂ ಭಂಡಾರದ ಧ್ಯೇಯ ವಾಕ್ಯವಾಗಿರುವ "ಪ್ರೇಮದಲ್ಲಿ ಶಿಸ್ತು" ಇದನ್ನು ಕುರಿತ ಅತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

## ಬಾಬೂಜಿ ಮಹಾರಾಜರು

"ನಮ್ಮ ಸಂಸ್ಥೆಯಲ್ಲಿ ವಿಶೇಷ ದಿನವಾಗಿರುವ, ಗುರುಗಳ ಜನ್ಮದಿನವನ್ನು, ಗೌರವಭಾವದಿಂದ ಹಾಗೂ ಪ್ರೇಮದಿಂದ ಆಚರಿಸಬೇಕಾಗಿದೆ. ಪ್ರತಿಯೊಬ್ಬ ಆಕಾಂಕ್ಷಿಯೂ ತನನ್ನು ಅತ್ಯುನ್ನತ ಗುರಿಯೆಡೆಗೆ ಕರೆದೊಯ್ಯಲು ಸಮರ್ಥರಾಗಿರುವ ದೈವೀ ಮಾರ್ಗದರ್ಶಿಯನ್ನು ತನ್ನ ಜೀವಿತದಲ್ಲಿ ಭೇಟಿಮಾಡಲು ಸಾಧ್ಯವಾಗಿರುವುದಕ್ಕಾಗಿ ತಾನು ಎಷ್ಟು ಅದೃಷ್ಟಶಾಲಿಯೆಂಬುದನ್ನು ಅರಿತುಕೊಳ್ಳಬೇಕು. ಸಾಧನೆಯ ಹಾದಿಯಲ್ಲಿ ಇದೊಂದು ವಿಶೇಷ ಅವಧಿಯಾಗಿದ್ದು, ಹೃದಯದ ತನ್ನೆಲ್ಲ ಕೃತಜ್ಞತೆಯನ್ನು ವ್ಯಕ್ತಪಡಿಸಲು ಹಾಗೂ ತೋರ್ಪಡಿಸಲು ಓರ್ವ ಶಿಷ್ಯನಿಗೆ ನೀಡಿರುವ ಅವಕಾಶವಿದಾಗಿದೆ".

ಶುಕ್ರವಾರ,ಏಪ್ರಿಲ್ 30,2004 – ಬೆಳಗ್ಗೆ 10 ಗಂಟೆಗೆ. ದಿವ್ಯಲೋಕದ ಪಿಸುಮಾತುಗಳು







# ಪರಮಪೂಜ್ಯ ಬಾಬೂಜಿ0ುವರ 112 ನೇ ಜನ್ಮದಿನದ ಸಮಾರಂಭಗಳು

ನಮ್ಮ ಪರಮಪೂಜ್ಯ ಬಾಬೂಜಿ0ುವರ 112ನೇ ಜನ್ಮ ದಿನೋತ್ಸವವನ್ನು ಕೃತಜ್ಞತಾ ಭಾವದಿಂದ,ಪ್ರೇಮದಿಂದ ದೇಶದಾದ್ಯಂತ ಆಚರಿಸಲಾಯಿತು.



ಗುಲ್ಬರ್ಗ



ಹುಬ್ಬಳ್ಳಿ



ದುರ್ಗಾಪುರ

## ಉತ್ತರ ಕರ್ನಾಟಕ

ಗುಲ್ಬರ್ಗ ಆಶ್ರಮದಲ್ಲಿ ಗುಲ್ಬರ್ಗ, ಸೇಡಂ, ಚಿತ್ತಾಪುರ್, ಶೊರಾಪುರ್ ಮತ್ತು ಹುಮ್ನಾಬಾದ್ ಕೇಂದ್ರಗಳಿಂದ ಸುಮಾರು 300 ಅಭ್ಯಾಸಿಗಳು ಸೇರಿದ್ದರು. ಕಾರ್ಯಕ್ರಮವು ಬಾಬೂಜಿ0ುವರ ಜೀವನ ಕುರಿತ ದೃಶ್ಯಾವಳಿ, 'ಬೀಯಿಂಗ್ ವಿತ್ ಹಿಮ್' ಸಿ.ಡಿ, ಬಾಬೂಜಿ0ುವರೊಂದಿಗಿನ ಅನುಭವಗಳ ಕುರಿತ ಭಾಷಣಗಳು, ಬಾಬೂಜಿ0ುವರ ಜೀವನದ ಕುರಿತ ಪ್ರಶ್ನಾವಳಿ ಹಾಗೂ ಗುರುಗಳ ಭಾಷಣವೊಂದರ ದೃಶ್ಯಾವಳಿಗಳನ್ನು ಒಳಗೊಂಡಿತ್ತು. ಅಂದು ಅಭ್ಯಾಸಿಗಳೆಲ್ಲರೂ ದೈವೀ ಕೃಪೆ0ುಲ್ಲಿ ಮಿಂದರು.

ಧಾರವಾಡ, ಬೇಲೂರು, ಗದಗ, ಪುಡ್ಕಲ್ಕಟ್ಟಿ, ಸಿರ್ಸಿ, ಕುಕ್ನೂರ್, ರಾಣೇಬೆನ್ನೂರು ಮತ್ತು ಕಲ್ಲೂರು ಕೇಂದ್ರಗಳಿಂದ ಬಂದಿದ್ದ ಸುಮಾರು 250 ಅಭ್ಯಾಸಿಗಳು ಹುಬ್ಬಳ್ಳಿ ಆಶ್ರಮದಲ್ಲಿ ಬಹಳ ಆಳವಾಗಿದ್ದ ಬೆಳಗಿನ ಸತ್ಸಂಗದಲ್ಲಿ ಪಾಲ್ಗೊಂಡಿದ್ದರು. ಉಪಹಾರದ ನಂತರ 'ಜರ್ನಿ ಇನ್ ಟೈಮ್' ಸಿ.ಡಿ0ುನ್ನು ತೋರಿಸಲಾಯಿತು. 0ುುವಜನರು ಪ್ರದರ್ಶಿಸಿದ ಬಾಬೂಜಿ0ುವರ ಜೀವನವನ್ನು ಕುರಿತ ನಾಟಕವು ಬಾಬೂಜಿ ಹಾಗೂ ನಮ್ಮ ಗುರುಗಳ ನಡುವಿನ ಅನೇಕ ಪ್ರಸಂಗಗಳ ನಿರೂಪಣೆ0ುನ್ನೊಳಗೊಂಡಿತ್ತು ಹಾಗೂ 'ಫೇಸ್ ಆಫ್ ದಿ ಎಸೆನ್ಸ್' ನಿಂದ ಬಾಬೂಜಿ0ುವರ ಫೋಟೋಗಳನ್ನು ಬಿತ್ತರಿಸಲಾಯಿತು. ಮಧ್ಯಾಹ್ನದ ಕಾರ್ಯಕ್ರಮದಲ್ಲಿ ಪ್ರಶ್ನಾವಳಿ,ಮಕ್ಕಳ ಕಾರ್ಯಕ್ರಮಗಳಿದ್ದವು ಹಾಗೂ ಸಂಜೆ0ು ಸತ್ಸಂಗದೊಂದಿಗೆ ಕಾರ್ಯಕ್ರಮವು ಮುಕ್ತಾ0ುವಾಯಿತು. ಅಲ್ಲಿನ ವಾತಾವರಣವು ಭಂಡಾರದ ವಾತಾವರಣದಂತಿತ್ತು.

ಬೀದರ್ ಕೇಂದ್ರದಲ್ಲಿ ನಡೆದ ಉತ್ಸವದಲ್ಲಿ ಭಾಲ್ಕಿ, ಚಾಂಗ್ಲೆರ್, ಥಾಣಾ ಕುಶ್ನೂರ್ ಕೇಂದ್ರಗಳಿಂದ ಸುಮಾರು 127 ಅಭ್ಯಾಸಿಗಳು ಸೇರಿದ್ದರು. ಕಾರ್ಯಕ್ರಮವು ಬಾಬೂಜಿ0ುವರ ಜೀವನ ಹಾಗೂ ತತ್ವಗಳ ಮೇಲೆ ಕೇಂದ್ರಿತವಾಗಿತ್ತು. ಸಹೋದರ ಹರಿಲಾಲ್ ಚವ್ಹಾಣ್ ಮಾತನಾಡಿದರು ಹಾಗೂ ಸಹೋದರ ಪಂಡರೀನಾಥ್ ಅವರು ಬಾಬೂಜಿ0ುವರ ಬೋಧನೆಗಳು ಮತ್ತು ಉಕ್ತಿಗಳನ್ನು ಕುರಿತ ಪ್ರಶ್ನಾವಳಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ದಕ್ಷಿಣ ಕರ್ನಾಟಕ

ಬೆಂಗಳೂರಿನ ಬನಶಂಕರಿ ಆಶ್ರಮದಲ್ಲಿ ಸಹೋದರರಾದ ಪೆರುಮಾಳ್, ಸುಬ್ರಮಣ್ಯ ಬಿ.ಜಿ. ಹಾಗೂ ಸಹೋದರಿ0ುರಾದ ವಸಂತ ಕುಮಾರಿ, ಮಾಧುರಿ0ುವರು ತಮ್ಮ ಭಾಷಣಗಳ ಮೂಲಕ ಬಾಬೂಜಿ0ುವರ ಬಗ್ಗೆ ಅತೀವ ಗೌರವಾದರಗಳನ್ನು ವ್ಯಕ್ತಪಡಿಸಿದರು. ಆಯ್ಕೆ ಮಾಡಿದ ವಿಷ0ುಗಳಲ್ಲಿ ಬಾಬೂಜಿ0ುವರ ಜೀವನ ಮತ್ತು ಭೋದನೆಗಳಿಗೆ ಒತ್ತುಕೊಡಲಾಗಿದ್ದಿತು.ಭಾಷಣಕಾರರೊಬ್ಬರು ಭೌತಿಕ ಪ್ರಪಂಚದ ಶಿಕ್ಷಕನಿಗೂ,ಜೀವನದ ಪ್ರತೀ ಕ್ಷಣದಲ್ಲಿ0ೂ ಒಬ್ಬ ತಾಯಿ0ುಂತೆ ಗಮನ ನೀಡುತ್ತಿರುವ ಆಧ್ಯಾತ್ಮಿಕ ಗುರುಗಳಿಗೂ ನಡುವೆ ಇರುವ ಕಾರ್ಯಶೈಲಿ0ು ತೀಕ್ಷ್ಣ ವ್ಯತ್ಯಾಸವನ್ನು ತಿಳಿಸಿದರು. ಸಹೋದರರಾದ ಶ್ರೀನಿವಾಸ್ ಹಾಗೂ ಸುಬ್ರಮಣ್ಯರವರು ನಡೆಸಿಕೊಟ್ಟ ಪ್ರಶ್ನಾವಳಿ ಕಾರ್ಯಕ್ರಮವು ಅಭ್ಯಾಸಿಗಳಲ್ಲಿ ಆಸಕ್ತಿ0ುನ್ನು ಕೆರಳಿಸಿತಷ್ಟೇ ಅಲ್ಲದೆ ಬಹಳ ಬೋಧಪ್ರದವಾಗಿತ್ತು. ಮಧ್ಯಾಹ್ನ



ಕೊಳ್ಳೆಗಾಲ



ಲಕ್ನೋ

ಬಾಬೂಜಿ0ುವರ ವೀಡಿ0ೋವೊಂದನ್ನು ತೋರಿಸಲಾಯಿತು. ಸಂಜೆ0ು ಸತ್ಸಂಗದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಕೊಳ್ಳೆಗಾಲದಲ್ಲಿ, ಟಿ.ನರಸೀಪುರ ಕೇಂದ್ರದ ಅಭ್ಯಾಸಿಗಳೂ ಸೇರಿದಂತೆ ಸುಮಾರು 41 ಅಭ್ಯಾಸಿಗಳು ಸೇರಿದ್ದರು. ಈ ಸಂದರ್ಭದಲ್ಲಿ ಸಹೋದರರಾದ ಮಧುಸೂದನ್, ಮಹದೇವಗೌಡ, ಶಿವಕುಮಾರ್ ಹಾಗೂ ಮಹದೇವಸ್ವಾಮಿ0ುವರು, ಸಹೋದರಿ0ುರಾದ ಅಲುಮೇಲಮ್ಮ ಹಾಗೂ ಧನಲಕ್ಷ್ಮಿ0ುವರು ಮಾತನಾಡಿದರು. ಭಾಗವಹಿಸಿದವರೆಲ್ಲರೂ ದೈವದೊಂದಿಗೆ ಐಕ್ಯತೆ0ುನ್ನು ಅನುಭವಿಸಿದರು.

## ಪಶ್ಚಿಮ ಬಂಗಾಳ

ಏಪ್ರಿಲ್ 29ರ ಸಂಜೆ0ು ಸತ್ಸಂಗದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಮರುದಿನ ಕೋಲ್ಕತ್ತಾ, ಬುರ್ದ್ವಾನ್, ಪನಾಗಢ್, ರಾಣೀಗಂಜ್, ಅಸಾನ್ಸೋಲ್, ಬುರ್ನ್ಪುರ್, ಕಜೋರಾ, ಸಿ0ುುರಿ, ಅಂದಾಲ್, ಚಿತ್ತರಂಜನ್ ಮತ್ತು ಬಂಕುರ ಕೇಂದ್ರಗಳೂ ಸೇರಿದಂತೆ ಸುಮಾರು 80 ಅಭ್ಯಾಸಿಗಳು ದುರ್ಗಾಪುರದಲ್ಲಿ ಪಾಲ್ಗೊಂಡಿದ್ದರು. ಸಹೋದರರಾದ 0ು.ಎಸ್. ಮಿಶ್ರಾ ಹಾಗೂ ಪರಿಮಳ್, ಸಹೋದರಿ ಕುಸುಮ್ ಮೆಹರಾ ಅವರು ಬೆಳಗಿನ ಕಾರ್ಯಕ್ರಮದಲ್ಲಿ ಮಾತನಾಡಿದ ನಂತರ ದೃಶ್ಯಾವಳಿ ಕಾರ್ಯಕ್ರಮವಿದ್ದಿತು. ಮಧ್ಯಾಹ್ನ ನಡೆದ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಅನೇಕ ಸಂದೇಹಗಳನ್ನು ಬಗೆಹರಿಸಿಕೊಳ್ಳಲಾಯಿತು. ಉತ್ಸವವು ಮೇ 1ರ ಬೆಳಗಿನ ಸತ್ಸಂಗದೊಂದಿಗೆ ಮುಕ್ತಾ0ುವಾಯಿತು. ಅಭ್ಯಾಸಿಗಳೆಲ್ಲರೂ ಅಲ್ಲಿದ್ದ ಆಧ್ಯಾತ್ಮಿಕ ವಾತಾವರಣದಲ್ಲಿ ಮುಳುಗಿಹೋಗಿದ್ದರು.

## ಉತ್ತರ ಪ್ರದೇಶ

ಲಕ್ನೋ ಕೇಂದ್ರದಲ್ಲಿ ನಡೆದ ಪೂರ್ಣದಿನದ ಕಾರ್ಯಕ್ರಮದಲ್ಲಿ ಸುಮಾರು 428 ಅಭ್ಯಾಸಿಗಳು ಭಾಗವಹಿಸಿದ್ದರು. ಅಂದಿನ ಕಾರ್ಯಕ್ರಮವು ಬಾಬೂಜಿ0ುವರ ವೀಡಿ0ೋಗಳು, ಭಾಷಣಗಳು ಹಾಗೂ ಭಜನೆಗಳನ್ನು ಒಳಗೊಂಡಿತ್ತು. 0ುುವಜನರು ಮತ್ತು ಮಕ್ಕಳು ಅಧ್ಯಾತ್ಮಿಕ ಬೋಧನೆಗಳನ್ನೊಳಗೊಂಡ ಅನೇಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಸಂಜೆ 5:30ರ ಸತ್ಸಂಗದೊಂದಿಗೆ ಅಂದಿನ ಕಾರ್ಯಕ್ರಮವು ಮುಕ್ತಾ0ುಗೊಂಡಿತು.

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ


ಚಿನ್ನವಲ್ಲೀಕುಳಂ


ಜಬಲ್‌ಪುರ್

## ಜಬಲ್‌ಪುರ್,ಮ.ಪ್ರ.

ಏಪ್ರಿಲ್ 29ರಂದು ಸಂಜೆಯ ಸತ್ಸಂಗದಿಂದ, 'ಪ್ರೇಮದಲ್ಲಿ ಶಿಸ್ತು' ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಸುಮಾರು 350 ಅಭ್ಯಾಸಿಗಳು ಪಾಲ್ಗೊಂಡರು. ಸಹೋದರ ವಿಕಲ್ಪ್(ವ.ಮು)ರವರು ನಾವು ಆಧ್ಯಾತ್ಮಿಕ ಪಥವನ್ನು ಪ್ರವೇಶಿಸಿದಾಗ ನಮ್ಮ ಗುರುಗಳೊಂದಿಗೆ ಹೇಗೆ ಸಂಬಂಧವನ್ನು ಬೆಳೆಸಿಕೊಳ್ಳುತ್ತೇವೆ ಹಾಗೂ ಆಂತರಿಕ ಪ್ರಜ್ಞೆಯಲ್ಲಿ ಅವರ ಬೆಳೆದ ಮೇಲಿನ ಪ್ರೇಮವು ಪ್ರಜ್ಞಾ ಸ್ಥಿತಿಯಲ್ಲಿ ಮಾಡುವ ಪ್ರಯತ್ನಕ್ಕೆ ಬೆಂಬಲ ನೀಡುವುದೆಂಬುದನ್ನು ವಿವರಿಸಿದರು. ಸಹೋದರಿ ದೀಪಾರವರು 'ಪ್ರೀತಿಸುವವನ ಗುಣಲಕ್ಷಣಗಳು' ಎಂಬುದರ ಬಗ್ಗೆ ಮಾತನಾಡುತ್ತಾ ಅದನ್ನು 'ವ್ಯವಸ್ಥಿತವಾದ ಪ್ರೇಮ' ಎಂದು ಹೇಳಿದರು.

ಡಾ॥ ಆರ್.ಕೆ. ಶ್ರೀವಾಸ್ತವರವರು ಹೇಗೆ ನಿಜವಾದ ಪ್ರೇಮಿಯು ಅಪ್ರಜ್ಞಾಪೂರ್ವಕವಾಗಿ ಶಿಸ್ತು ಬದ್ಧನಾಗಿರುತ್ತಾನೆ ಎಂಬುದರ ಬಗ್ಗೆ ಮಾತನಾಡಿದರು ಹಾಗೂ ಸಹೋದರಿ ಸುನಿತಾ ಶುಕ್ಲಾರವರು ಪ್ರೇಮ ಮತ್ತು ಶಿಸ್ತು ಹೇಗೆ ಜೊತೆಜೊತೆಯಾಗಿ ಸಾಗುತ್ತವೆ ಎಂಬುದನ್ನು ವಿವರಿಸಿದರು.ಹತ್ತು ನಿಯಮಗಳನ್ನು ಕುರಿತ ಪ್ರಶ್ನಾವಳಿ,ನಾಟಕ ಕಾರ್ಯಕ್ರಮ ಹಾಗೂ ಕೆಲವು ಭಜನೆಗಳು ಅಭ್ಯಾಸಿಗಳಿಗೆ ದೈವವನ್ನು ಅನುಭವಿಸಲು ಹಾಗೂ ಅದರಲ್ಲಿ ಒಂದಾಗಲು ಸಹಾಯಮಾಡಿದವು. ಮಕ್ಕಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಬಾಬೂಜಿಯವರ ಜೀವನ ಕುರಿತ ವಿಡಿಯೋ ಸಿ.ಡಿಯನ್ನು ತೋರಿಸಲಾಯಿತು. ಸಹೋದರ ವಿಕಲ್ಪ್‌ರವರು ಮುಂದಿನ ಪೀಳಿಗೆಯವರಿಗೆ ರವಾನಿಸಬೇಕಾಗಿರುವ ಆಶ್ರಮದ ಸಂಪತ್ತನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದರ ಅವಶ್ಯಕತೆಯನ್ನು ಪ್ರಭಾವ ಬೀರುವಂತೆ ತಿಳಿಸುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ದಕ್ಷಿಣ ತಮಿಳುನಾಡು.

ಸುತ್ತಮುತ್ತಲಿನ ಸುಮಾರು 13 ಕೇಂದ್ರಗಳ ಅಭ್ಯಾಸಿಗಳೂ ಸೇರಿದಂತೆ ಮಧುರೈ ನಲ್ಲಿ 500 ಅಭ್ಯಾಸಿಗಳು ಸೇರಿದ್ದರು. ಬಾಬೂಜಿಯವರ 'ಸತ್ಯೋದಯ' ಎಂಬುದು ಕಾರ್ಯಕ್ರಮದ ಧ್ಯೇಯವಾಕ್ಯವಾಗಿತ್ತು. ಪುಸ್ತಕದ ಕೆಲವು ಅಧ್ಯಾಯಗಳನ್ನು ಮಧುರೈ, ಶೋಲವಂದನ್, ಥೇಣಿ, ಬತಲಗುಂಡು ಮತ್ತು ಕಾರೈಕುಡಿ ಕೇಂದ್ರಗಳ ಅಭ್ಯಾಸಿಗಳು ವಿವರಿಸಿದರು. ಮಧ್ಯಾಹ್ನದ ಭೋಜನದ ನಂತರ ಇನ್ನುಳಿದ ಅಧ್ಯಾಯಗಳನ್ನು ಮೇಲೂರ್, ಸಿಂಗಂಪುನರಿ, ಪರಮಕುಡಿ, ರಾಮನಾಥಪುರಂ, ಮನಮಧುರೈ, ಮಧುರೈ ಹಾಗೂ ಸಿವಗಂಗೈ ಕೇಂದ್ರಗಳ ಅಭ್ಯಾಸಿಗಳು ವಿವರಿಸಿದರು. ಸಹೋದರರಾದ ಪಳನಿಯಪ್ಪನ್, ನಾಗರಾಜನ್, ರಾಧಕೃಷ್ಣನ್‌ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಆ ದೈವೀ ವಾತಾವರಣದಲ್ಲಿ ಬಾಬೂಜಿಯವರ ಸ್ಮರಣೆಲ್ಲಿದ್ದುದ್ದಕ್ಕೆ ಹಾಗೂ ಅವರ ಬೋಧನೆಗಳ ಬಗ್ಗೆ ಇನ್ನೂ ಹೆಚ್ಚಿನ ಅರಿವನ್ನು ಹೊಂದಿದ್ದಕ್ಕೆ ಎಲ್ಲರೂ ಸಂತಸಗೊಂಡರು.

ಚಿನ್ನವಲ್ಲೀಕುಳಂ ಆಶ್ರಮದಲ್ಲಿ ವಿರುಧುನಗರ್, ಚಿನ್ನವಲ್ಲೀಕುಳಂ, ಅರುಪ್ಪುಕೋಟ್ಟಯ್, ಕರಿಯಪಟ್ಟಿ, ಕೋವಿಲ್‌ಪಟ್ಟಿ ಹಾಗೂ ಶಿವಕಾಶಿ ಕೇಂದ್ರಗಳಿಂದ ಸುಮಾರು 30 ಅಭ್ಯಾಸಿಗಳು ಸೇರಿದ್ದರು. ಬೆಳಗಿನ ಸತ್ಸಂಗದ ನಂತರ ಸಹೋದರ ಸ್ವಾಮಿನಾಥನ್‌ರವರು 'ಬಾಬೂಜಿ ಮಹಾರಾಜರ ಜೀವನ ಚರಿತ್ರೆ' ಯನ್ನು ಓದಿದರು. ಸಾಧನೆ, ಚಾರಿತ್ರ್ಯ ನಿರ್ಮಾಣ, ವಿಧೇಯತೆ, ಸ್ವೀಕಾರ ಮನೋಭಾವ ಹಾಗೂ ಶರಣಾಗತಿ ಈ ವಿಷಯಗಳ ಬಗ್ಗೆ ಅಭ್ಯಾಸಿಗಳು ತಮ್ಮ ಚಿಂತನೆಗಳನ್ನು ಹಂಚಿಕೊಂಡರು. ಸಂಸ್ಥೆಯ ಕೆಲಸವನ್ನು ತಮ್ಮ ಕೆಲಸದಂತೆ ಕಾಣುವ ಭಾವನೆಯನ್ನು ಬೆಳೆಸಿಕೊಳ್ಳುವುದು ಕಾರ್ಯಕ್ರಮದಲ್ಲಿ ಮೂಡಿಬಂದ ಮುಖ್ಯಾಂಶವಾಗಿತ್ತು. ಮಧ್ಯಾಹ್ನದ ಅವಧಿಯಲ್ಲಿ ಪ್ರೇಮವನ್ನು ಕುರಿತ ಗುಂಪುಚರ್ಚೆ ಕಾರ್ಯಕ್ರಮವಿತ್ತು. ಸಂಜೆಯ ಸತ್ಸಂಗದೊಂದಿಗೆ ಪೂರ್ಣದಿನದ ಕಾರ್ಯಕ್ರಮ ಮುಕ್ತಾಯಗೊಂಡಿತು.


ಅಹ್ಮದಾಬಾದ್


ಆನಂದ್

## ಗುಜರಾತ್

ಗುಜರಾತ್‌ನ ಆನಂದ್ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 83 ಅಭ್ಯಾಸಿಗಳು ಭಾಗವಹಿಸಿದರು. ಸತ್ಸಂಗದ ನಂತರದ ಸಿ.ಡಿ 'ಸೀ ಆಫ್ ಲವ್' ನ ದೃಶ್ಯಾವಳಿಯು ಪ್ರತಿಯೊಬ್ಬರನ್ನೂ ಬಾಬೂಜಿ ಮಹಾರಾಜರ ಕಾಲಕ್ಕೆ ಕರೆದೊಯ್ಯಿತು. ವಿರಾಮದ ನಂತರ ಮೌಲ್ಯಗಳನ್ನು ಒಳಗೊಂಡ ಸಣ್ಣ ಕಥೆಯೊಂದನ್ನು ಎಲ್ಲರಿಗೂ ನೀಡಲಾಯಿತು. ಎಲ್ಲರೂ ಕಥೆಯ ಸಾರಾಂಶವನ್ನು ಹಾಗೂ ಚಿಂತನೆಗಳನ್ನು ಹಂಚಿಕೊಂಡರು. ಮಧ್ಯಾಹ್ನ ಧ್ಯಾನ, ಶುದ್ಧೀಕರಣ, ಪ್ರಾರ್ಥನೆ, ನಿರಂತರ ಸ್ಮರಣೆ ಮತ್ತು ಜೀವಂತ ಗುರುವಿನ ಅವಶ್ಯಕತೆ ಈ ವಿಷಯಗಳ ಬಗ್ಗೆ ಗುಂಪು ಚರ್ಚೆಗಳಿದ್ದವು. ಸಂಜೆಯ ಸತ್ಸಂಗದ ನಂತರ ಭಜನೆಗಳನ್ನು ಹಾಡಲಾಯಿತು.

ಗುಜರಾತ್‌ನ ವಲಯ 6–ಎ ನ ಸುಮಾರು 900 ಅಭ್ಯಾಸಿಗಳು ಅಹ್ಮದಾಬಾದ್ ಆಶ್ರಮದಲ್ಲಿ ನಡೆದ ಉತ್ಸವದಲ್ಲಿ ಸೇರಿದ್ದರು. ಗುಂಪು ಚರ್ಚೆಗಳು, ನಾಟಕ ಪ್ರದರ್ಶನ ಹಾಗೂ ಗುರುಗಳ ಫೋಟೋಗಳ ದೃಶ್ಯಾವಳಿ ಕಾರ್ಯಕ್ರಮಗಳಿದ್ದವು. ಪರಿಸರ ಸಂರಕ್ಷಣೆ ಹಾಗೂ ಅದರ ಅರಿವನ್ನು ಮೂಡಿಸುವ ಕಾರ್ಯಕ್ರಮದ ಭಾಗವಾಗಿ ಆಶ್ರಮದಲ್ಲಿ ಕೆಲವು ಮರಗಳನ್ನು ನೆಡಲಾಯಿತು. ಹೊಸ ಅಭ್ಯಾಸಿಗಳಿಗಾಗಿ ಭಾನುವಾರದಂದು ಅಭ್ಯಾಸಿ ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಡಲಾಯಿತು. ಇದೇ ಕಾರ್ಯಕ್ರಮವನ್ನು ದೂರದ ಕೇಂದ್ರಗಳಲ್ಲಿ ಹಾಗೂ ಉಪ ಕೇಂದ್ರಗಳಲ್ಲಿ ನಡೆಸುವುದಕ್ಕಾಗಿ ಭಾಷಣಕಾರರಿಗೆ ತರಬೇತಿಯನ್ನು ನಂತರ ನಡೆಸಿಕೊಡಲಾಯಿತು.

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಬೋರ್ಸ್ ಇಂಡಿಯಾ ವಾರ್ತಾಪತ್ರ

# 0ುವಜನರಿಗಾಗಿ ಕಾರ್ಯಕ್ರಮಗಳು

## 0ುವಜನರ ಅಭಿವೃದ್ಧಿ ಶಿಬಿರ, ಇಂದೋರ್, ಮ.ಪ್ರ.



ಜೂನ್ 4 ಮತ್ತು 5ರಂದು ಇಂದೋರ್‌ನಲ್ಲಿ 17 ವರ್ಷ ಮೇಲ್ಪಟ್ಟ 0ುವಜನರಿಗೆ 2 ದಿನದ ನಿವಾಸಿ ಶಿಬಿರವು ನಡೆಯಿತು. ಕೆಲವು ಕುಶಲಕಲೆಗಳನ್ನು ಹಾಗೂ ಲೌಕಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗಳ ಸಮತೋಲನವನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಅವರೆಲ್ಲರಲ್ಲಿ0ೂ ಮೈಗೂಡಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿತ್ತು.

ಸನ್ವೇರ್, ಭೋಪಾಲ್, ಸೊಹಾಗ್‌ಪುರ್, ದೇವಾಸ್, ರತ್ಲಾಮ್, ವಿದಿಷಾ ಮತ್ತು ಇಂದೋರ್ ಕೇಂದ್ರಗಳಿಂದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದರು. ಅವರನ್ನು ನಾಲ್ಕು ಗುಂಪುಗಳಾಗಿ ವಿಂಗಡನೆ ಮಾಡಲಾಗಿತ್ತು. ಸಂವಹನ ಕೌಶಲ್ಯಗಳ ಬಗ್ಗೆ ನಡೆದ ಕಾರ್ಯಕ್ರಮದ ನಂತರ ಸಮಸ್ಯೆಗಳನ್ನು ಬಗೆಹರಿಸಲು ಬೇಕಾದ ಧೈರ್ಯ ಮತ್ತು ಸತತ ಪ್ರ0ುತ್ನದ ಬಗ್ಗೆ,ಸೃಜನಶೀಲತೆ ಹಾಗೂ ತಮ್ಮ ಸ್ವಂತಬುದ್ಧಿಯಿಂದಾಚೆಗೆ 0ೋಚಿಸುವುದನ್ನು ರೂಢಿಸಿಕೊಳ್ಳುವುದರ ಬಗ್ಗೆ ಕಾರ್ಯಕ್ರಮಗಳಿದ್ದವು. ಸಂಜೆ 'ದಿ ಸೀಕ್ರೆಟ್' ಎಂಬ ಚಲನಚಿತ್ರವನ್ನು ತೋರಿಸಲಾಯಿತು.

ಮರುದಿನ ಸತ್ಸಂಗದ ನಂತರ ತಂಡವಾಗಿ ಕೆಲಸ ಮಾಡುವುದು ಹಾಗೂ ಸಮ0ು ನಿರ್ವಹಣೆ0ು ಬಗ್ಗೆ ಕುಶಲ ಕ್ರೀಡೆಗಳೂ ಸೇರಿದಂತೆ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಕುತೂಹಲಕಾರಿ ಕಾರ್ಯಕ್ರಮಗಳಿದ್ದವು. ಸಂದರ್ಶನ ಕೌಶಲ್ಯಗಳ ಬಗ್ಗೆ ಪ್ರತಿಸ್ಪಂದನ ಹಾಗೂ ಗುಂಪುಚರ್ಚೆಗಳನ್ನು ನಡೆಸಲಾಯಿತು. ಸಹೋದರರಾದ ವಿಕಲ್ಪ್ ಮುಂದ್ರ ಹಾಗೂ ಶ್ರೇ0ುಸ್ಕರ್ ಚೌಧರಿ0ುವರು ಸಮಾರೋಪ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪ್ರತಿ ದಿನವೂ ದೊಡ್ಡ ಸಂಖ್ಯೆ0ುಲ್ಲಿ ಕಾರ್ಮಿಕರನ್ನು ನಿಭಾಯಿಸುತ್ತಿರುವ ಹೊಂದಿರುವ ಇಬ್ಬರು 0ುವ ಕೈಗಾರಿಕೋದ್ಯಮಿಗಳು ಜೀವನ ಕೆಲವು ನೈಜ ಸಂಗತಿಗಳನ್ನು ಕುರಿತ ಹಲವಾರು ಪ್ರಶ್ನೆಗಳಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ ಉತ್ತರಿಸಿದರು. ಭಾಗವಹಿಸಿದವರೆಲ್ಲರಿಗೂ ಕಾರ್ಯಕ್ರಮವು ಪ್ರಾ0ೋಗಿಕವಾಗಿ0ೂ, ಪ್ರ0ೋಜನಕಾರಿ0ಾಗಿ0ೂ ಹಾಗೂ ಜ್ಞಾನಭರಿತವೂ ಆಗಿತ್ತು.

## ವಲ0ು ಮಟ್ಟದ 0ುವಜನರ ವಿಚಾರಸಂಕಿರಣ

ವಡೋದರ ಕೇಂದ್ರದಲ್ಲಿ ಜೂನ್ 11, 12 ರಂದು ಮೊಟ್ಟ ಮೊದಲ ಬಾರಿಗೆ ಈ ಕಾರ್ಯಕ್ರಮವನ್ನು ಅ0ೋಜಿಸಲಾಗಿತ್ತು. ವಿವಿಧ ಕೇಂದ್ರಗಳಿಂದ ಸುಮಾರು 75 0ುವಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬೆಳಗಿನ ಅವಧಿ0ುಲ್ಲಿ ಸಾಧನೆ0ು ವಿವಿಧ ಅಂಗಗಳು,ಚಾರಿತ್ರ್ಯ ನಿರ್ಮಾಣ ಇವುಗಳ ಬಗ್ಗೆ ಗುಂಪು ಚರ್ಚೆಗಳು, ಭಾಗವಹಿಸಿದ್ದವರಿಂದ ಕೆಲವು ನಿರೂಪಣೆಗಳು ಮತ್ತು ಪ್ರಶ್ನೋತ್ತರ ಕಾರ್ಯಕ್ರಗಳಿದ್ದವು. ಮಧ್ಯಾಹ್ನದ ಅವಧಿ0ುಲ್ಲಿ ಹತ್ತು ನಿ0ುಮಗಳ ಕುರಿತ ಒಂದು ದೃಶ್ಯನಾಟಕದ ಸಿದ್ಧತೆ ಹಾಗೂ ಅದರ ಪ್ರದರ್ಶನಗಳಿದ್ದವು. ಸಂಜೆ ಅನೇಕ ಹೊರಾಂಗಣ ಕ್ರೀಡೆಗಳನ್ನು ಆಡಿಸಲಾಯಿತು ಹಾಗೂ ಎಲ್ಲರೂ ಹಾಡುಗಳನ್ನು,ಭಜನೆಗಳನ್ನು ಹಾಡಿದರು,ರಾತ್ರಿ0ು ಭೋಜನದ ನಂತರ ನಗೆಹನಿಗಳನ್ನು ಹೇಳಿದರು. ಹೇಗೆ ನಮ್ಮ ಸಾಧನೆ0ುನ್ನು ಪರಿಣಾಮಕಾರಿ0ಾಗಿ ಮಾಡಬೇಕು ಇದರ ಬಗ್ಗೆ ಸಹೋದರ ಕಮಲೇಶ್ ಪಟೇಲ್‌ರವರ ಭಾಷಣ ಹಾಗೂ ನಂತರ ನಡೆದ ಪ್ರತಿಸ್ಪಂದನ ಕಾರ್ಯಕ್ರಮಗಳು ಎಲ್ಲರಿಗೂ ಬಹಳ ಪ್ರ0ೋಜನಕಾರಿ0ಾಗಿದ್ದವು. ಅಕ್ಟೋಬರ್‌ನಲ್ಲಿ ನಡೆ0ುಲಿರುವ ಮುಂದಿನ 0ುವಜನ ಸಂಕಿರಣಕ್ಕೆ ಎಲ್ಲರಿಗೂ ವಿಷ0ುವನ್ನು ಪ್ರಸ್ತಾಪಿಸುವಂತೆ ಕೇಳಿಕೊಳ್ಳಲು 'ಇಚ್ಛಾಶಕ್ತಿ ಹಾಗೂ ಶಿಸ್ತು' ಎಂಬ ವಿಷ0ುವನ್ನು ಅ0ುದುಕೊಳ್ಳಲಾಯಿತು.

## 0ುವಜನರಿಗಾಗಿ ಭಾನುವಾರದ ಕಾರ್ಯಕ್ರಮ, ದೊಮಲ್ಗುಡ, ಆಂ.ಪ್ರ.

2011 ಜನವರಿಯಿಂದಲೂ ಪ್ರತಿ ಭಾನುವಾರ ಬೆಳಗ್ಗೆ 9:30 ರಿಂದ 11:30 ರವರೆಗೆ ದೊಮಲ್ಗುಡ ಹಾಗೂ ಎಸ್.ಆರ್. ನಗರ್ ಆಶ್ರಮಗಳಲ್ಲಿ 0ುವಜನರಿಗಾಗಿ ನಡೆಸುತ್ತಿರುವ ಕಾರ್ಯಕ್ರಮದಲ್ಲಿ ಸುಮಾರು 20–25 0ುವಜನರು ಭಾಗವಹಿಸುತ್ತಿದ್ದಾರೆ. 0ುವಜನರಿಗೆ ಪ್ರತಿಸ್ಪಂದನ ನಡೆಸಲು, ಸಾಧನೆ ಹಾಗೂ ಸಂಸ್ಥೆ0ು ಬಗ್ಗೆ ಹೆಚ್ಚು ತಿಳಿದುಕೊಳ್ಳುವಂತೆ ವೇದಿಕೆ0ುನ್ನು ನಿರ್ಮಿಸುವುದೇ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಚಾರಿತ್ರ್ಯ ನಿರ್ಮಾಣ, ದಿನಚರಿ ಬರೆ0ುುವುದು, ಕುಶಲ ಕ್ರೀಡೆಗಳು, ಸಹಜ ಮಾರ್ಗದ ಸಾಹಿತ್ಯ ಕುರಿತ ಪದಬಂಧ, ಪಾತ್ರಾಭಿನ0ು, ಕಥೆಗಳನ್ನು ಹೇಳುವುದು, ಮೂಕಪಾತ್ರಾಭಿನ0ು, ಪ್ರಶಿಕ್ಷಕರೊಂದಿಗೆ ಪ್ರಶ್ನೋತ್ತರ ಇನ್ನೂ ಮುಂತಾದ ವಿಷ0ುಗಳ ಕುರಿತ ಅನೇಕ ಕಾರ್ಯಕ್ರಮಗಳು ನಡೆ0ುುತ್ತವೆ. ಈ ಕಾರ್ಯಕ್ರಮಗಳು,ಸಹಜ ಮಾರ್ಗದ ತತ್ವಗಳನ್ನು ಹಾಗೂ ಚಾರಿತ್ರ್ಯ ನಿರ್ಮಾಣವನ್ನು 0ುವಜನರಲ್ಲಿ ನಿಧಾನವಾಗಿ ತುಂಬುವುದರ ಪ್ರ0ುತ್ನವಾಗಿದೆ.

## ನಿವಾಸಿ ಶಿಬಿರ,ಇಂದೋರ್

ಮೇ 21–22 ರಂದು ಇಂದೋರ್ ಕೇಂದ್ರದಲ್ಲಿ 0ುವಜನರಿಗಾಗಿ ಶಿಬಿರವೊಂದನ್ನು ನಡೆಸಲಾಯಿತು. ಭವಿಷ್ಯದ ಅಭ್ಯಾಸಿಗಳೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸಿಕೊಳ್ಳುವುದು ಕಾರ್ಯಕ್ರಮದ ಉದ್ದೇಶವಾಗಿತ್ತು. ನೆನಪಿನ ಶಕ್ತಿ0ು ಒಂದು ಆಟದ ಮೂಲಕ ಸೃಜನಾತ್ಮಕವಾಗಿ 0ುವಜನರು ತಮ್ಮ ತಮ್ಮ ಪರಿಚ0ು ಮಾಡಿಕೊಟ್ಟರು. ಎಲ್ಲರನ್ನೂ 5 ತಂಡಗಳಾಗಿ ವಿಂಗಡಿಸಿ ಗಂಟನ್ನು ಕಟ್ಟುವುದು, ಕಾಗದವೊಂದನ್ನು ಅದರ ಮೇಲೆ ನಿಂತುಕೊಂಡೇ ಅದನ್ನು ಮಡಚುವುದು ಹಾಗೂ ಸಾಂಪ್ರದಾಯಿಕವಾದ 'ಮಟ್ಕೀ ಫೋಡ್' ಆಟಗಳನ್ನು ಆಡಿಸಲಾಯಿತು. ಸಹೋದರಿ 0ಾಮಿನಿ ಕರ್ಮರ್ಕರ್ ಹಾಗೂ ಸಹೋದರ ಸುನೀಲ್ ಖನ್ನಾರವರು 'ನಿನ್ನನ್ನು ನೀನು ಅರಿ0ುುವುದು' ಹಾಗೂ 'ಗುರಿ0ುನ್ನು ನಿಗದಿಪಡಿಸಿಕೊಳ್ಳುವುದು' ಇದರ ಬಗ್ಗೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸಂಜೆ ಮಕ್ಕಳನ್ನು ಹತ್ತಿರವಿದ್ದ ವಲ0ು ಉದ್ಯಾನವನಕ್ಕೆ ಕರೆದೊ0್ಯಲಾಯಿತು. ಸ'ಹೋದರಿ0ುರ ಮಾರ್ಗದರ್ಶನದಲ್ಲಿ ಅವರು ರುಚಿ0ಾದ ಪಾವ್ ಭಾಜಿಗಳನ್ನೂ ತ0ಾರಿಸಿದರು.

ಮರುದಿನ ಅವರನ್ನು ಸಾಂಪ್ರದಾಯಿಕ ಆಟಗಳನ್ನು ಆಡಲು ಬೇಕಾಗಿರುವ ಸಲಕರಣೆಗಳನ್ನು ಸಿದ್ಧಮಾಡಿ ಇಟ್ಟಿದ್ದ ಎಸ್.ಆರ್.ಸಿ.ಎಮ್‌ನ ಹೊಸ ಜಾಗಕ್ಕೆ ಕರೆದೊ0್ಯಲಾಯಿತು. ನಂತರದ 2 ಗಂಟೆಗಳ ಅವಧಿ0ುನ್ನು ಗಾಳಿಪಟ ಹರಿಸುವುದರಲ್ಲಿ,ಸತೋಲಿ0ು ಹಾಗೂ ಗಿಲ್ಲಿ ದಾಂಡು ಆಡುವುದರಲ್ಲಿ ಕಳೆದರು. ಸಹೋದರಿ ಶಶಿ ಶರ್ಮಾ ಹಾಗೂ ಸಹೋದರ ರಾಜೇಶ್ ರವೇರ್ಕರ್‌ರವರು ನಡೆಸಿಕೊಟ್ಟ 'ಹೃದ0ಾಂತರಾಳದ ಪತ' ಕಾರ್ಯಕ್ರಮವು ಹೃದ0ುಸ್ಪರ್ಶಿ0ಾಗಿತ್ತು. ಒಬ್ಬ ತಾಯಿ ಕಾಳಜಿಯಿಂದ ತನ್ನ ಮಗುವಿನ 0ೋಗಕ್ಷೇಮಕ್ಕಾಗಿ ಬರೆದ ಪತ್ರವೊಂದನ್ನು ಓದಲಾಯಿತು. ಇದಕ್ಕೆ ಪ್ರತಿಕ್ರಿ0ೆ0ಾಗಿ ಎಲ್ಲಾ ಮಕ್ಕಳೂ,ಪ್ರೇಮ ಮತ್ತು ಕೃತಜ್ಞತೆ0ುನ್ನು ವ್ಯಕ್ತಪಡಿಸುತ್ತಾ ತಮ್ಮ ತಾ0ುಂದಿರಿಗೆ ಪತ್ರಗಳನ್ನು ಬರೆದರು. ಮಕ್ಕಳ ಜೀವನದಲ್ಲಿ ಪೋಷಕರ ಪಾತ್ರ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ತಿಳಿಸುವುದು ಅದರ ಉದ್ದೇಶವಾಗಿತ್ತು. 'ಸರ್ವಶಕ್ತ ಮತ್ತು ನಾನು' ಎನ್ನುವ ಕಾರ್ಯಕ್ರಮದೊಂದಿಗೆ ಶಿಬಿರವು ಮುಕ್ತಾ0ುವಾಯಿತು.



ವಡೋದರ



ಇಂದೋರ್

ಸಂಪುಟ 4 ಸಂಚಿಕೆ 4 ಜುಲೈ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

# ಮಕ್ಕಳಿಗಾಗಿ ಬೇಸಿಗೆ ಶಿಬಿರಗಳು

## ಬಾಬೂಜಿ ಮೆಮೋರಿ0ಯಲ್ ಆಶ್ರಮ, ಚೆನ್ನೈ

ಮೇ 6 ರಿಂದ 8ರವರೆಗೆ 7 ರಿಂದ 13 ವ0ಯೋಮಾನದ ಸುಮಾರು 70 ಮಕ್ಕಳಿಗೆ ಶಿಬಿರವನ್ನು ಆ0ಯೋಜಿಸಲಾಗಿತ್ತು. ಶಿಬಿರವು ಐಸ್ ಬ್ರೇಕಿಂಗ್‌ನಿಂದ ಶುರುವಾಯಿತು. ನಂತರ ಕರ ಕುಶಲ ಚಟುವಟಿಕೆಗಳಿದ್ದವು. ಮೂರು ದಿನದ ಈ ಕಾ0ರ್ಯಕ್ರಮದಲ್ಲಿ ದೈಹಿಕ ವ್ಯಾ0ಯಾಮ,ಗುರುಗಳ ಮೇಲೆ ಹಾಡುಗಳು, ಪ್ರತಿಸ್ಪಂದನಗಳು, ಆಶ್ರಮದ ನಕ್ಷೆ0ಯನ್ನು ಬಿಡಿಸುವುದು, ತಂಡವಾಗಿ ಕೆಲಸ ಮಾಡಲು ಉತ್ತೇಜಿಸುವಂತ ಆಟಗಳು, ಪ್ರೇಮದಿಂದ ಎಲ್ಲವನ್ನೂ ಜಯಿಸಬಹುದು ಕುರಿತ ದೃಶ್ಯನಾಟಕ, ಬಟ್ಟೆಯಿಂದ ಮಾಡಿದ ಚೀಲಗಳಿಗೆ ಬಣ್ಣ ಹಚ್ಚುವುದು, ಜೀವನದ ಎಲ್ಲಾ ಸಂಪತ್ತುಗಳನ್ನು ಹುಡುಕುವ ನಿಧಿ ಅನ್ವೇಷಣೆ ಆಟ ಹಾಗೂ ಪ್ರಶ್ನಾವಳಿ ಕಾ0ರ್ಯಕ್ರಮಗಳಿದ್ದವು. ಭಗವಾನ್ ಶ್ರೀ ಕೃಷ್ಣನ ಚಲನಚಿತ್ರವೊಂದನ್ನು ತೋರಿಸಲಾಯಿತು. ಒಂದು ಸಾಂಸ್ಕೃತಿಕ ಕಾ0ರ್ಯಕ್ರಮದೊಂದಿಗೆ ಕಾ0ರ್ಯಕ್ರಮವು ಮುಕ್ತಾ0ಯಗೊಂಡ ನಂತರ ಎಲ್ಲರಿಗೂ ಒಬ್ಬ ಹೊಸ ಸ್ನೇಹಿತ ಎಂಬುವಂತೆ ಒಂದು ಗುಲಾಬಿ ಗಿಡವನ್ನು ಹಾಗೂ ಈ ಕಾ0ರ್ಯಕ್ರಮಗಳ ಸಿ.ಡಿ0ಯನ್ನು ನೀಡಲಾಯಿತು. ಮಕ್ಕಳು ಮತ್ತು ಪೋಷಕರೊಂದಿಗಿನ ಪ್ರತಿಸ್ಪಂದನದ ಪ್ರತಿಕ್ರಿ0ಯೆ0ಯೊಂದಿಗೆ ಕಾ0ರ್ಯಕ್ರಮವು ಕೊನೆಗೊಂಡಿತು.


ಚೆನ್ನೈ

## ವೆಲ್ಲೂರ್, ತಮಿಳುನಾಡು

ಮೇ 28ರಂದು 3 ರಿಂದ 15 ವ0ಯೋಮಾನದ ಸುಮರು 50 ಮಕ್ಕಳಿಗಾಗಿ ವೆಲ್ಲೂರ್ ಆಶ್ರಮದಲ್ಲಿ ಒಂದು ದಿನದ ಶಿಬಿರವನ್ನು ಏರ್ಪಡಿಸಲಾಗಿತ್ತು. ಬೇರೆ ಬೇರೆ ಸ್ಥಳಗಳಿಂದ ಬಂದಿದ್ದ ಮಕ್ಕಳು ಪ್ರತಿಸ್ಪಂದನ ಮಾಡುವುದು ಮತ್ತು ಅವರು ಮೌಲ್ಯ0ಯುತವಾದ ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಳ್ಳುವಂತೆ ಮಾಡುವುದು ಈ ಕಾ0ರ್ಯಕ್ರಮದ ಗುರಿ0ಯಾಗಿತ್ತು. ಅವರನ್ನು ವ0ಯಸ್ಸಿನ ಆಧಾರದ ಮೇಲೆ 2 ಗುಂಪುಗಳನ್ನಾಗಿ ವಿಂಗಡನೆ ಮಾಡಲಾಯಿತು. ಒಂದು ಗುಂಪಾಗಿ,ತಂಡವಾಗಿ ಮತ್ತು ವೈ0ಯಕ್ತಿವಾಗಿ ಮಾಡಿದ ಕೆಲವು ಸೃಜನಾತ್ಮಕ ಅಂಶಗಳನ್ನು ಕಾ0ರ್ಯಕ್ರಮವು ಒಳಗೊಂಡಿತ್ತು. ಮಕ್ಕಳು ಹಾಡು,ಭರತನಾಟ್ಯ,0ಯೋಗ ಮುಂತಾದ ಕಾ0ರ್ಯಕ್ರಮಗಳನ್ನು ನೀಡಿದರು. 0ಯುವಕನೊಬ್ಬನು, ತನ್ನ ಮತ್ತು ಸ್ನೇಹಿತರ ಕುಟುಂಬದ ವಾತಾವರಣದಲ್ಲಿ ಬದಲಾವಣೆ0ಯನ್ನು ತರುವುದಕ್ಕಾಗಿ,ತಾನು ಆಂತರಿಕವಾಗಿ ಪರಿವರ್ತನೆ ಹೊಂದುವ ಹಾಗೂ ಗುರುಗಳಿಗಾಗಿ ಅವನಿಗಿರುವ ಹಂಬಲವನ್ನು 'ಸಹಜ ಮಾರ್ಗ ಒಂದು ಜೀವನದ ಮಾರ್ಗ' ಎನ್ನುವ ಒಂದು ಕಿರುನಾಟಕದ ಮೂಲಕ ಮನಮುಟ್ಟುವಂತೆ ಬಿಂಬಿಸಲಾಯಿತು.


ವೆಲ್ಲೂರ್

## ಹೈದರಾಬಾದ್

ಮೇ 6ರಿಂದ 8ರವರೆಗೆ ಹೈದರಾಬಾದ್‌ನಲ್ಲಿ 3 ದಿನದ ಸಹಜ್ ಕ್ಯಾಂಪನ್ನು ಆ0ಯೋಜಿಸಲಾಗಿತ್ತು ಹಾಗೂ ಇದರಲ್ಲಿ ಸುಮಾರು 90 ಮಕ್ಕಳು ಬಹಳ ಉತ್ಸಾಹದಿಂದ ಭಾಗವಹಿಸಿದರು. ಒಬ್ಬರನ್ನೊಬ್ಬರು ಪರಿಚ0ಯ ಮಾಡಿಕೊಳ್ಳುವ ಹಾಗೂ ಹೆಚ್ಚು ಸ್ನೇಹಿತರನ್ನು ಮಾಡಿಕೊಳ್ಳುವ ಐಸ್ ಬ್ರೇಕಿಂಗ್‌ನೊಂದಿಗೆ ಶಿಬಿರವು ಪ್ರಾರಂಭವಾಯಿತು. ತಮ್ಮ ಪೋಷಕರನ್ನು ಪ್ರೀತಿಸುವುದು, ಪ್ರೇಮದಲ್ಲಿ ಶಿಸ್ತು ಹೀಗೆ ವಿವಿಧ ವಿಷ0ಯಗಳ ಬಗ್ಗೆ ಗುಂಪು ಚಟುವಟಿಕೆಗಳಿದ್ದವು.ನಂತರ ಪೂರ್ಣಚಿತ್ರದ ಒಂದು ಭಾಗವನ್ನು ನೋಡುವ ಮೂಲಕ ಅ ಚಿತ್ರ 0ಯಾವುದೆಂಬುದನ್ನು ಕಂಡುಹಿಡಿ0ಯಬೇಕಾದ ನವೀನವಾದ ಹೊರಾಂಗಣ ಆಟವೊಂದನ್ನು ನಂತರದ 1 ಗಂಟೆ ಅವಧಿ0ಯಲ್ಲಿ ಆಡಿಸಲಾಯಿತು. ಮಕ್ಕಳು ಮತ್ತು ಪೋಷಕರು ಒಬ್ಬರನ್ನೊಬ್ಬರು ಎಷ್ಟು ಚೆನ್ನಾಗಿ ತಿಳಿದಿದ್ದಾರೆ ಎಂಬ ಅರಿವನ್ನುಂಟುಮಾಡಲು 'ಪೋಷಕರು ಮತ್ತು ಮಕ್ಕಳು' ಎಂಬ ಕಾ0ರ್ಯಕ್ರಮದೊಂದಿಗೆ ಎರಡನೆ0ಯ ದಿನದ ಕಾ0ರ್ಯಕ್ರಮವು ಪ್ರಾರಂಭವಾಯಿತು. ಸಹೋದರ ಅನಂತ್‌ರವರೊಂದಿಗೆ ತಮ್ಮ ಸ್ಪಷ್ಟೀಕರಣಕ್ಕಾಗಿ ಹಾಗೂ ಅಭ್ಯಾಸಿ0ಯಾಗಲು ಸಿದ್ಧರಾಗುವುದಕ್ಕಾಗಿ ಹಿರಿ0ಯರ ಗುಂಪಿಗಾಗಿ ಪ್ರತಿಸ್ಪಂದನವನ್ನು ಏರ್ಪಡಿಸಲಾಗಿತ್ತು. ಸಹೋದರ ಶ್ರೀನಿವಾಸ್‌ರವರು ಧ್ಯಾನದಿಂದ ನಮ್ಮಲ್ಲಿ ಹೇಗೆ ಮಾನವೀ0ಯತೆ0ಯು ತಾನಾಗಿ0ಯೆ ಹುಟ್ಟುವುದು ಎಂಬುದನ್ನು ವಿವರಿಸಿದರು. ಮಕ್ಕಳೆಲ್ಲರಿಗೂ 'ನನ್ನ ಗುರುದೇವ' ಪುಸ್ತಕದ ಪ್ರತಿ0ಯನ್ನು ನೀಡಲಾಯಿತು ಹಾಗೂ ಸಹೋದರಿ ರುಚಿತಾರವರ ನೃತ್ಯಪ್ರದರ್ಶನದೊಂದಿಗೆ ಶಿಬಿರವು ಮುಕ್ತಾ0ಯವಾಯಿತು.


ಹೈದರಾಬಾದ್

## ರಾ0ಯಚೂರು

ಏಪ್ರಿಲ್ 14ರಿಂದ 16ರವರೆಗೆ ಸಹೋದರಿ0ಯರಾದ ಜಿ.ಲಕ್ಷ್ಮಿ ಮತ್ತು ನಾಗವೇಣಿ0ಯವರು ಸುಮಾರು 40 ಮಕ್ಕಳಿಗೆ 3 ದಿನದ ಶಿಬಿರವನ್ನು ನಡೆಸಿಕೊಟ್ಟರು. ದೇವರು ಮತ್ತು ಗುರುಗಳು, ಆರೋಗ್ಯಕರ ಜೀವನ ಹಾಗೂ ಶಿಸ್ತು ಈ ವಿಷ0ಯಗಳನ್ನು ಸ್ವಾರಸ್ಯಕರ ಕಥೆ, ನಿರೂಪಣೆಗಳೊಂದಿಗೆ ಮಕ್ಕಳಿಗೆ ಅರ್ಥೈಸಲಾಯಿತು. ಮಧ್ಯಾಹ್ನ ಈ ವಿಷ0ಯಗಳನ್ನು ಕುರಿತು ಕೆಲವು ಚಟುವಟಿಕೆಗಳಿದ್ದವು. ಕೊನೆ0ಯ ದಿನ ಡಾ. ಬಾಲಸುಬ್ರಮಣಿ0ಯನ್ ಹಾಗೂ ಡಾ.ಅನ್ನಪೂರ್ಣರವರು ಮಕ್ಕಳಿಗೆ ಆರೋಗ್ಯಕರ ಆಹಾರ ಅಭ್ಯಾಸಗಳು ಹಾಗೂ ಸದಾಚಾರವು ಹೇಗೆ ಅವರಿಗೆ ಆರೋಗ್ಯಕರ ಜೀವನವನ್ನು ನಡೆಸಲು ಹೇಗೆ ಸಹಾ0ಯಕವಾಗುವುದೆಂದು ತಿಳಿಸಿದರು. ಏಪ್ರಿಲ್ 17ರ ಭಾನುವಾರದ ಸತ್ಸಂಗದ ನಂತರ ಆಹ್ವಾನಿತ ಮಕ್ಕಳ ಪೋಷಕರಿಗೆ ಈ ರೀತಿ0ಯ ಕಾ0ರ್ಯಕ್ರಮಗಳ ಹಿಂದಿನ ನಿಜವಾದ ಉದ್ದೇಶವನ್ನು ವಿವರಿಸಿದರು. ಅವರೆಲ್ಲರಿಗೂ ನಮ್ಮ ಗುರುಗಳು, ಸಂಸ್ಥೆ ಮತ್ತು ಪದ್ಧತಿ0ಯ ಬಗ್ಗೆ0ಯೂ ತಿಳಿಸಲಾಯಿತು. ಮಕ್ಕಳೆಲ್ಲರೂ ಕಾ0ರ್ಯಗಾರದ ಸಮ0ಯದಲ್ಲಿ ತಮಗಾದ ಅನುಭವಗಳ ಬಗ್ಗೆ ಮಾತನಾಡಿದರು. ಸಂಸ್ಥೆ0ಯ ಪುಸ್ತಕಗಳನ್ನು ಮಾರಾಟಕ್ಕೆ ಇಡಲಾಗಿತ್ತು ಹಾಗೂ ಎಲ್ಲಾ ಪೋಷಕರಿಗೂ ಹಸ್ತಪತ್ರಿಕೆಗಳನ್ನು ನೀಡಿದರು, ಅವರಲ್ಲಿ ಕೆಲವರು ಸಾಧನೆ0ಯನ್ನು ಪ್ರಾರಂಭಿಸುವಲ್ಲಿ ಆಸಕ್ತಿ0ಯನ್ನು ತೋರಿದ್ದಾರೆ.


ರಾ0ಯಚೂರು

## ಭುಜ್,ಗುಜರಾತ್

ಮೇ 23ರಿಂದ 28ರವರೆಗೆ ಭುಜ್ ಕೇಂದ್ರದಲ್ಲಿ 6ರಿಂದ 12 ವ0ಯೋಮಾನದ ಮಕ್ಕಳಿಗಾಗಿ ಶಿಬಿರವನ್ನು ಏರ್ಪಡಿಸಿದ್ದರು. ವ0ಯಸ್ಸಿನ ಅಧಾರದ ಮೇಲೆ ಮಕ್ಕಳನ್ನು 2 ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಕಾ0ರ್ಯಕ್ರಮದಲ್ಲಿ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳು ಹಾಗೂ ವಿವಿಧ ವಿಷ0ಯಗಳ ಬಗ್ಗೆ ಮೌಲ್ಯಾಧಾರಿತ ಚಟುವಟಿಕೆಗಳಿದ್ದವು. ಕಡೆ0ಯ ದಿನ ಎಲ್ಲಾ ಪೋಷಕರನ್ನು ಆಹ್ವಾನಿಸಿ ಕಾ0ರ್ಯಕ್ರಮದ ಸಾರಾಂಶವನ್ನು ಹಾಗೂ ಅನೌಪಚಾರಿಕವಾಗಿ ಸಂಸ್ಥೆ ಹಾಗೂ ಪದ್ಧತಿ0ಯ ಬಗ್ಗೆ ಪರಿಚ0ಯ ಮಾಡಿಕೊಡಲಾಯಿತು. 40ಕ್ಕೂ ಹೆಚ್ಚು ಪೋಷಕರು ಭಾಗವಹಿಸಿ,ಅವರ ಮಕ್ಕಳನ್ನು ಪ್ರೋತ್ಸಾಹಿಸಿದರು. ಸ್ಥಳೀ0ಯ ಟಿ.ವಿ ನ್ಯೂಸ್ ಚ್ಯಾನೆಲ್‌ನಲ್ಲಿ ಶಿಬಿರದ ಬಗ್ಗೆ ಹೇಳಲಾಯಿತು. ಗುರುಗಳ ಕೃಪೆಯಿಂದ ಹಾಗೂ ಮಕ್ಕಳೂ ಸೇರಿದಂತೆ ಸುಮಾರು 25 ಸ್ವ0ಯಂಸೇವಕರ ಹೃದ0ಯಪೂರ್ಣ ಸೇವೆಯಿಂದ ಕಾ0ರ್ಯಕ್ರಮವು 0ಯಶಸ್ವಿ0ಯಾಗಿ ನಡೆಯಿತು.



ಭುಜ್

## ಬಹ್ರೇಚ್ ಕೇಂದ್ರ, ಉ.ಪ್ರ.

ಬಹ್ರೇಚ್ ಕೆಂದ್ರವು ಎಸ್.ಆರ್.ಸಿ.ಎಮ್‌ನಲ್ಲಿ ವೇಗವಾಗಿ ಹೊರಹೊಮ್ಮುತ್ತಿರುವ ಕೇಂದ್ರಗಳಲ್ಲೊಂದಾಗಿದೆ. ಇದು ನೇಪಾಳದ ಗಡಿಗೆ ಹತ್ತಿರದಲ್ಲಿ, ಲಕ್ನೋದ ಉತ್ತರ–ಪೂರ್ವದಲ್ಲಿ 125 ಕಿ.ಮೀ ದೂರದಲ್ಲಿದೆ. ಬಹ್ರೇಚ್ ಕೇಂದ್ರವು ಉತ್ತರ ಪ್ರದೇಶದ ಇತರ ಜಿಲ್ಲೆಗಳಿಗೆ ಒಳ್ಳೆಯ ರಸ್ತೆ ಮಾರ್ಗವನ್ನು ಹೊಂದಿದ್ದು, ಈ ಪ್ರದೇಶದಲ್ಲಿ ಸಂಸ್ಥೆಯ ಪ್ರಮುಖ ಕೆಂದ್ರವಾಗಿದೆ. ಆಶ್ರಮದ ಜಾಗವು ಬಹ್ರೇಚ್‌ನಿಂದ ಸುಮಾರು 6 ಕಿ.ಮೀ ದೂರದಲ್ಲಿದ್ದು ಸುಮಾರು 2 ಎಕರೆಯಷ್ಟಿದೆ. ಜೂನ್ 12 ರಂದು ಆಶ್ರಮದ ಭೂಮಿಪೂಜೆಯನ್ನು ಆಯೋಜಿಸಲಾಗಿತ್ತು. ಈ ಸುಸಂದರ್ಭದಲ್ಲಿ ಗೋರಖ್‌ಪುರದ ಪ್ರಶಿಕ್ಷಕರಾದ ನರ್‌ಸಿಂಗ್ ಹಾಗೂ ವಿಜಯ್ ಶಂಕರ್‌ರವರನ್ನೂ ಒಳಗೊಂಡಂತೆ ಸುಮಾರು 100 ಜನರು ಉಪಸ್ಥಿತರಿದ್ದರು. ಗೋಂಡಾ ಕೇಂದ್ರದ ಪ್ರಶಿಕ್ಷಕರಾದ ಸಹೋದರ ಬದ್ರಿಪ್ರಸಾದ್ ಸಿಂಗ್‌ರವರು ಮಾತನಾಡುತ್ತಾ ಆಶ್ರಮವು ಆತ್ಮದ ಮನೆಯಾಗಿದ್ದು,ಅದು ತನ್ನ ಅಸ್ತಿತ್ವವನ್ನು ಅಂಗೀಕರಿಸುತ್ತದೆ ಎಂದು ಹೇಳಿದರು.

## ವಾರಾಂತ್ಯದ ಕಾರ್ಯಕ್ರಮ, ನಾಟ್ರಾಂಪಲ್ಲಿ, ತಮಿಳುನಾಡು.

ವೆಲ್ಲೂರ್ ವಲಯದ ಸುಮಾರು 45 ಅಭ್ಯಾಸಿಗಳಿಗೆ ಮೇ 21–22 ರಂದು ಸಹಜ ಮಾರ್ಗ ಜೀವನದ ಮಾರ್ಗ ಎನ್ನುವ ಬಗ್ಗೆ ನಾಟ್ರಾಂಪಲ್ಲಿ ಆಶ್ರಮದಲ್ಲಿ ಕಾರ್ಯಕ್ರಮದಲ್ಲಿ



ನಡೆಯಿತು. ಸಹೊದರ ಭರತರಾಜನ್‌ರವರ ಆರಂಭಿಕ ಭಾಷಣದ ನಂತರ ಸಾಧನೆಯ ಪ್ರಾಮುಖ್ಯತೆಯ ಬಗ್ಗೆ ನಿರೂಪಣಾ ಕಾರ್ಯಕ್ರಮವಿತ್ತು. ಸಾಧನೆಯ ವಿವಿಧ ವಿಷಯಗಳ ಬಗ್ಗೆ ಅಭ್ಯಾಸಿಗಳು ತಮ್ಮ ಚಿಂತನೆಗಳು ಹಾಗೂ ಅನಿಸಿಕೆಗಳನ್ನು ಹಂಚಿಕೊಂಡರು. ವೀಡಿಯೋವೊಂದರ ಮೂಲಕ ಸಾಧನೆಯನ್ನು ಕುರಿತ ಪ್ರಶ್ನೆಗಳಿಗೆ ಗುರುಗಳು ಸ್ಪಷ್ಟನೆ ನೀಡಿದ್ದು ಕಾರ್ಯಕ್ರಮದ ಮುಖ್ಯಾಂಶವಾಗಿತ್ತು. ಗುಂಪು ಚರ್ಚೆಗಳು ಹಾಗೂ ವೀಡಿಯೋ ನಿರೂಪಣೆಗಳ ಮೂಲಕ ಸಹಜ ಮಾರ್ಗ ಸಾಧನೆಯ ವಿಷಯಗಳನ್ನು ಒತ್ತಿ ಹೇಳಲಾಯಿತು. ಸಹೋದರ ಬಾಲಸುಬ್ರಮಣಿಯಂರವರ ಭ್ರಾತೃತ್ವ ಕುರಿತ ಭಾಷಣ ಹಾಗೂ ಅವಲೋಕನ ಕಾರ್ಯಕ್ರಮಗಳು ಜೀವನದ ಎಲ್ಲಾ ಸ್ಥರದಲ್ಲಿಯೂ ಸಹಜ ಮಾರ್ಗವನ್ನು ಅಳವಡಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

## ಕಥೆಗಳಿಂದ ಕಲಿಯುವುದು. ಕೆ.ಜಿ.ಎಫ್, ಕರ್ನಾಟಕ ದಕ್ಷಿಣ.

ಬೆಂಗಳೂರಿನ ಪ್ರಕಟನಾ ವಿಭಾಗದ ವ್ಯವಸ್ಥಾಪಕರು ಮತ್ತವರ ತಂಡದಿಂದ ಆಯೋಜಿತವಾಗಿದ್ದ ಈ ಕಾರ್ಯಕ್ರಮದಲ್ಲಿ ಕೆ.ಜಿ.ಎಫ್, ಕೋಲಾರ ಮತ್ತು ಮುಳಬಾಗಿಲು ಕೇಂದ್ರಗಳ ಸುಮಾರು 30 ಅಭ್ಯಾಸಿಗಳು ಭಾಗವಹಿಸಿದ್ದರು. ನಿರೂಪಣೆಯೊಂದು ಸಂಸ್ಥೆಯ ಸಾಹಿತ್ಯವನ್ನು ಓದುವುದು ಸಾಧನೆಯ ಒಂದು ಬಹುಮುಖ್ಯ ಅಂಗವೆಂದೂ ಅವುಗಳನ್ನು ನಾವು ಉದ್ದೇಶದಿಂದ,ಜಾಗರೂಕರಾಗಿ ಹಾಗೂ ಮತ್ತೆ ಮತ್ತೆ ನಿಯಮಿತವಾಗಿ ಜ್ಞಾನಸಂಪಾದನೆಗಾಗಿ ಹಾಗೂ ನಿರಂತರ ಸ್ಮರಣೆಯಲ್ಲಿರುವುದಕ್ಕಾಗಿ ಓದುವುದರ ಪ್ರಾಮುಖ್ಯತೆಯನ್ನು ಪ್ರಸ್ತುತ ಪಡಿಸಿದರು. ನಂತರ ಅಭ್ಯಾಸಿಗಳು ಇಂಗ್ಲೀಷ್, ಕನ್ನಡ,ತಮಿಳು, ತೆಲುಗು ಹೀಗೆ ತಮಗೆ ಸರಿಹೊಂದುವ ಭಾಷೆಯಲ್ಲಿ ಕಥೆಗಳನ್ನು ಓದುವುದರ ಮೂಲಕ ಕಾರ್ಯಕ್ರಮವು ಮುಂದುವರೆಯಿತು. ಗುರುಗಳು ಹೇಳಿರುವ ಅನೇಕ ಕಥೆಗಳ ನಿರೂಪಣೆಯನ್ನು ನೀಡುತ್ತಾ ಅವುಗಳ ಹಿಂದಿರುವ ಮೌಲ್ಯಗಳ ಬಗ್ಗೆ ಚರ್ಚಿಸಲಾಯಿತು.

ಆಯೋಜಕರು ಕಾರ್ಯಕ್ರಮವನ್ನು ಬಹಳ ಕುತೂಹಲಕಾರಿಯಾಗಿಯೂ, ಜ್ಞಾನಭರಿತವಾಗಿರುವಂತೆಯೂ ಮಾಡಿದ್ದರು, ಇದರಿಂದ ಅಭ್ಯಾಸಿಗಳು ಬಹಳ ಪ್ರಭಾವಿತರಾಗಿ, ಆಸಕ್ತಿಯಿಂದ ಪುಸ್ತಗಳನ್ನು ಕೊಂಡುಕೊಂಡರು.



## ವಿಶ್ವ ಪರಿಸರ ದಿನಾಚರಣೆ, ಜಾಮ್ ನಗರ್

ಜೂನ್ 5ರಂದು ಎಲ್ಲಾ ಸ್ವಯಂಸೇವಕರು ಮತ್ತು ಮಕ್ಕಳು ಆಸಕ್ತಿಯಿಂದ ಭಾಗವಹಿಸುವುದರ ಮೂಲಕ ವಿಶ್ವ ಪರಿಸರ ದಿನವನ್ನು ಆಚರಿಸಿದರು. ಕಾರ್ಯಕ್ರಮವು ಸಹೋದರ ಸಚಿನ್ ವ್ಯಾಸ್‌ರವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಗಿ, ನಂತರ ಗುಬ್ಬಿಯ ಗೂಡನ್ನು ನಿರ್ಮಿಸುವುದರೊಂದಿಗೆ ಕಾರ್ಯಕ್ರಮವು ಮುಂದುವರೆಯಿತು. ಸ. ಅರ್ಪಿತ್ ದಿಯೊಮುರಾತಿ, ಪಕ್ಷಿ ವಿಜ್ಞಾನಿ ಹೇಗೆ ಗುಬ್ಬಿ ಗೂಡನ್ನು ಬಳಸಬೇಕು, ಪಕ್ಷಿಗಳಿಗೆ ಉಣಿಸುವುದು ಹೇಗೆ, ಗಿಡ ನೆಡುವ ಬಗೆ ಮೊದಲಾದವುಗಳನ್ನು ತಿಳಿಸಿದರು. ಮಕ್ಕಳಿಗೆ ಮರದ ಗುಬ್ಬಿ ಗೂಡು, ಹಕ್ಕಿಯ ಅಹಾರ,ಉಣಿಸುವ ಸಾಧನ ಮತ್ತು ಬಳ್ಳಿಗಳನ್ನು ಉಡುಗೊರೆಯಾಗಿ ನೀಡಲಾಯಿತು. ಮತ್ತವುಗಳನ್ನು ಹೇಗೆ ಪರಿಣಾಮಕಾರಿಯಾಗಿ ಬಳಸಿ ಪಟ್ಟಣ ಪ್ರದೇಶಗಳಲ್ಲಿ ಪಕ್ಷಿಗಳನ್ನು ಆಕರ್ಷಿಸಬಹುದು ಮತ್ತುಪರಿಸರ ಕಾಳಜಿ ಮಾಡಬಹುದೆಂದು ತಿಳಿಸಿಕೊಟ್ಟರು.

## ಹೃದಯದಿಂದ ಹೃದಯಕ್ಕೆ, ರಾಯ್ ಪುರ. ಚತ್ತೀಸ್‌ಘಢ್

24 ಏಪ್ರಿಲ್ ರಂದು ರಾಯ್‌ಪುರದ 'ಯೋಗಾಶ್ರಮ'ದಲ್ಲಿ ಭಾನುವಾರದ ಸತ್ಸಂಗದ ನಂತರ ಏರ್ಪಡಿಸಲಾಗಿದ್ದ ಹೃದಯದಿಂದ ಹೃದಯಕ್ಕೆ ಕಾರ್ಯಕ್ರಮದಲ್ಲಿ 37 ಸಹೋದರಿಯರು ಭಾಗವಹಿಸಿದ್ದರು. ಇವರುಗಳನ್ನು 8 ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೂ ಒಂದೊಂದು ವಿಷಯವನ್ನು ನೀಡಲಾಗಿತ್ತು. ಸಹೋದರಿಯರು ಕೊಡಲಾದ ವಿಷಯಗಳನ್ನು ಅತ್ಯುತ್ತಮವಾಗಿ ಚರ್ಚಿಸಿದರು. ಗುಂಪಿನ ನಾಯಕರು ನಂತರ ತಾವು ಅವಲೋಕಿಸಿದ ಅಂಶಗಳನ್ನು ಪ್ರಸ್ತುತ ಪಡಿಸಿದರು. Sisters ಪದದಲ್ಲಿರುವ ಅಕ್ಷರಗಳ ಸುಂದರ ವ್ಯಾಖ್ಯಾನವನ್ನು ನೀಡಲಾಯಿತು. ಬಹಳಷ್ಟು ಜನ ಸಹೋದರಿಯರು ತಾವು ಜೀವನದ ಭೌತಿಕ ಹಾಗು ಆಧ್ಯಾತ್ಮಿಕ ಅಂಗಗಳನ್ನು ಸಮತೊಲನಗೊಳಿಸಲು ಸಹಜಮಾರ್ಗದ ಹತ್ತು ನಿಯಮಗಳನ್ನು ಪಾಲಿಸಲು ಪ್ರಯತ್ನಿಸುವುದಾಗಿ ಹೇಳಿದರು. ಅವರುಗಳು ಇನ್ನೂ ಹೆಚ್ಚು ಮಂದಿ ಸಹಜಮಾರ್ಗಕ್ಕೆ ಸೇರಿ ಲಾಭ ಹೊಂದಲೆಂದು ಪ್ರೇರೇಪಿಸುತ್ತಿದ್ದಾರೆ. ಸಕಾರಾತ್ಮಕ ಚಿಂತನೆಯುಳ್ಳ ಇವರು ಜೀವನದ ಬಹಳಷ್ಟು ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗಿದ್ದು ಸಹಜಮಾರ್ಗಕ್ಕೆ ಸೇರಿದ ನಂತರ ತಮ್ಮ ಮಕ್ಕಳ ನಡವಳಿಕೆಗಳಲ್ಲೂ ಅನೇಕ ಬದಲಾವಣೆಗಳು ಉಂಟಾಗಿರುವುದನ್ನು ಅನುಭವಿಸಿದ್ದಾರೆ. ಮಕ್ಕಳು ವಿದ್ಯಾಭ್ಯಾಸವನ್ನು ಗಂಭೀರವಾಗಿ ಪರಿಗಣಿಸಿದ್ದು ಗುರುಗಳನ್ನೂ ತುಂಬಾ ಪ್ರೀತಿಸುದರೊಂದಿಗೆ ಅಶ್ರಮದ ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾರೆ. ಅವರುಗಳು ತಮ್ಮ ಪೋಷಕರು ಸಹಜಮಾರ್ಗವನ್ನು ಅನುಸರಿಸುವುದರ ಬಗ್ಗೆ ಹೆಮ್ಮೆ ಉಳ್ಳವರಾಗಿದ್ದು ತಾವು ಹದಿನೆಂಟು ವರ್ಷದವರಾಗಿ ಅಭ್ಯಾಸಿಗಳಾಗುವುದನ್ನೇ ಎದುರು ನೋಡುತ್ತಿದ್ದಾರೆ. ಇನ್ನೂ ಹೆಚ್ಚಾಗಿ ಕೆಲ ಸಹೋದರಿಯರು ಕಾವ್ಯಾತ್ಮಕವಾಗಿ ತಮ್ಮ ಭಾವನೆಗಳನ್ನ ವ್ಯಕ್ತಪಡಿಸಿದರು. ಕೆಲವರು ಗುರುಗಳೊಂದಿಗಿನ ತಮ್ಮ ಒಡನಾಟವನ್ನು ಉದಾಹರಿಸಿದರು. ಸಹೋದರಿಯೊಬ್ಬರು ಗುರುಗಳ ಮೇಲಿನ ಅಚಲ ಶ್ರದ್ಧೆ ತಮ್ಮ ಗುಣಪಡಿಸಲಾಗದ ಕಾಯಿಲೆಯನ್ನು ಹೇಗೆ ಗುಣಪಡಿಸಿತು ಎಂಬುದನ್ನು ಹೇಳಿದರು. ಕೊನೆಯದಾಗಿ ಕರಗಿರುವ ಹೃದಯ ಮತ್ತು ಹನಿಗೂಡಿದ ಕಣ್ಣುಗಳಿಂದ ಸಹೋದರಿಯರೆಲ್ಲರೂ ಗುರುಗಳನ್ನು ಸ್ಮರಿಸುತ್ತಾ ಈ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಸ.ರಂಜಿನಿ ದತ್ತಾ ಅವರಿಗೆ ಧನ್ಯವಾದಗಳನ್ನರ್ಪಿಸಿದರು. ಹೃದಯದಿಂದ ಹೃದಯಕ್ಕೆ ಕಾರ್ಯಕ್ರಮವು ಪ್ರೀತಿ ಮತ್ತು ಭಕ್ತಿಗಳು ಪುನಃಶ್ಚೇತನಗೊಳ್ಳುವುದರೊಂದಿಗೆ ಮುಕ್ತಾಯವಾಯಿತು.

# ಮಧುರೈ ಆಶ್ರಮ






1975 ರಲ್ಲಿ ಮಧುರೈನಲ್ಲಿ ಅಲ್ಲಿನ ತೇಪ್ಪಕುಲಂನ ಸಹೋದರ ತಸ್ಮಸ್ವಾಮಿ0ುವರ ಮನೆ0ುಲ್ಲಿ ಬಹಳ ಚಿಕ್ಕ ಕೇಂದ್ರವಾಗಿ ಎಸ್.ಆರ್.ಸಿ.ಎಮ್ ಆರಂಭವಾಯಿತು. ಬಾಬೂಜಿ0ುವರ ಪವಿತ್ರವಾದ ಉಪಸ್ಥಿತಿ0ುಲ್ಲಿ ಅವರ 78ನೆ0ು ಹುಟ್ಟುಹಬ್ಬವು ಈ ಕೇಂದ್ರದಲ್ಲಿ ನಡೆಸಲು ಅವಕಾಶ ದೊರೆತದ್ದು ಅದರ ಅದೃಷ್ಟವೇ ಸರಿ. ಉತ್ಸವದಲ್ಲಿ ಸುಮಾರು 800 ಅಭ್ಯಾಸಿಗಳು ಹಾಜರಿದ್ದರು ಹಾಗೂ ತಮಿಳು ಮತ್ತು ಇಂಗ್ಲೀಷ್‌ನಲ್ಲಿ ಒಂದು ಸ್ಮರಣ ಸಂಚಿಕೆ0ುನ್ನು ಈ ಸುಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

1992ರ ಏಪ್ರಿಲ್ 11 ಮತ್ತು 12ರಂದು ಕೇಂದ್ರವು ತನ್ನ ರಜತ ಮಹೋತ್ಸವವನ್ನು ಆಚರಿಸಿಕೊಂಡಿತು. ಗುರುಗಳು ಈ ಸುಸಂದರ್ಭದಲ್ಲಿ ಮಾತನಾಡುತ್ತಾ 'ಆದುದರಿಂದ,ಅಧ್ಯಾತ್ಮಕ್ಕೆ ಕಾಲಿಟ್ಟವರಿಗೆ ಧ್ಯಾನವೆಂಬುದು ಕೇವಲ ಒಂದು ಗಂಟೆ0ು ಕ್ರಿ0ು0ುಲ್ಲ. ಧ್ಯಾನವು ಗುರಿ0ುನ್ನು ಸಾಧಿಸಲು ಇರುವ ಏಕಚಿತ್ತವಾದ ಕರ್ತವ್ಯ.ನಮ್ಮ ಸಾಂಸ್ಕೃತಿಕ ಪರಂಪರೆ0ುಲ್ಲಿ ಧ್ಯಾನವೆಂಬುದು ಶಾಶ್ವತವಾದ ಅಂಗವಾಗಬೇಕು' ಎಂದು ಹೇಳಿದರು. ಈ ಉತ್ಸವದ ನಂತರ ಕೇಂದ್ರವನ್ನು ವೆಸ್ಟ್ ಬ್ಯಾಂಕ್‌ನ ಮರಿ0ುಮ್ಮನ್ ತೇಪ್ಪಕುಲಂನಲ್ಲಿರುವ ಡಾ.ಗೋಕುಲ್‌ನಾಥ್ ಪ್ರೇಮ್‌ಚಂದ್ ಅವರ ಮನೆಗೆ ಸ್ಥಳಾಂತರಿಸಲಾಯಿತು.

## ಮಧುರೈ ಆಶ್ರಮದ ಪ್ರಾರಂಭ

ಮಧುರೈನ,ಅಲ್ಗರ್‌ಕಾಯಿಲ್ ರಸ್ತೆ0ುಲ್ಲಿರುವ,ರೈಲ್ವೆ ಮತ್ತು ಬಸ್ ನಿಲ್ದಾಣಗಳಿಂದ 11 ಕಿ.ಮೀ ದೂರದಲ್ಲಿರುವ ಸುಂದರರಾಜಂಪಟ್ಟಿ0ುಲ್ಲಿ ಆಶ್ರಮಕ್ಕಾಗಿ ಭೂಮಿ0ುನ್ನು ದೇಣಿಗೆ ನೀಡಲು ಸಹೋದರ–ಸಹೋದರಿ0ುರು ನಿರ್ಧರಿಸಿದರು. 1992–1994 ರಲ್ಲಿ ಸಂಸ್ಥೆಗಾಗಿ ಭೂಮಿ0ುನ್ನು ಖರೀದಿಸಲಾಯಿತು ಹಾಗೂ ಉಳಿದ ಭೂಮಿ0ುನ್ನು ಅಭ್ಯಾಸಿಗಳಿಗಾಗಿ ಮೀಸಲಿಡಲಾಯಿತು.ಇದಕ್ಕೆ ಗುರುಗಳು 'ಶ್ರೀ ರಾಮಚಂದ್ರ ಪುರಂ' ಎಂದು ಹೆಸರಿಟ್ಟರು.ನಂತರ ಗುರುಗಳ ಅನುಮತಿ0ುನ್ನು ಪಡೆದು ಇನ್ನೂ ಒಂದೂವರೆ ಎಕರೆ0ು ಅಧಿಕೃತ ಭೂಮಿ0ುನ್ನು ಕೊಂಡು ಒಟ್ಟು ಭೂಮಿ0ುನ್ನು ನಾಲ್ಕು ಎಕರೆ ಇಪ್ಪತ್ತು ಸೆಂಟ್ಸ್‌ಗೆ ಹೆಚ್ಚಿಸಲಾಯಿತು.

1995ರಿಂದ ಒಂದು ಹುಲ್ಲಿನ ಹೊದಿಕೆಯಿದ್ದ ಗುಡಿಸಲಿನಲ್ಲಿ ನಿ0ುಮಿತವಾದ ಸತ್ಸಂಗವು ಪ್ರಾರಂಭವಾಯಿತು. ತದನಂತರ ಒಂದು ಸ್ಥಿರವಾದ ಕಟ್ಟಡವನ್ನು ಕಟ್ಟಲಾಗಿ ಅದನ್ನು ಗುರುಗಳು 22ನೇ ಸೆಪ್ಟಂಬರ್ 1997 ರಲ್ಲಿ ಅದನ್ನು ಎಲ್ಲರು ಬಳಸಬಹುದೆಂದು ಘೋಷಿಸಿ ಅದಕ್ಕೆ 'ಮಾಸ್ಟರ್ಸ್ ಚೇಂಬರ್' ಎಂದು ಹೆಸರಿಟ್ಟರು. ಅವರು 'ಸಾಧನಾ ನಿಲ0ುಂ' ಧ್ಯಾನ ಮಂದಿರಕ್ಕಾಗಿ ಆಧಾರ ಶಿಲೆ0ುನ್ನು ಹಾಕಿಕೊಟ್ಟರು. 17ನೇ ನವೆಂಬರ್ 2004ರಂದು ಹೊಸ ಧ್ಯಾನ ಮಂದಿರವನ್ನು(10,800 ಚ.ಅ) ತೆರೆ0ುುವಂತೆ ಹೇಳಿದರು. ವೇದಿಕೆ0ು ಮೇಲಿದ್ದ ಗುರುಗಳ ದೊಡ್ಡ ಗಾತ್ರದ ಫೋಟೊ ಎಲ್ಲರ ಮನಸೆಳೆದಿತ್ತು. ಇದೊಂದು ತಾತ್ಕಾಲಿಕವಾದ ಕಟ್ಟಡವಾಗಿದ್ದು ಸುಮಾರು 1500 ಜನರು ಕುಳಿತುಕೊಳ್ಳಲು ಸ್ಥಳಾವಕಾಶವಿದೆ. ಕಟ್ಟಡಕ್ಕೆ ಉಪ0ುೋಗಿಸಿದ ವಸ್ತುಗಳು ಗುರುಗಳು ನೀಡಿದ ಕೊಡುಗೆ0ುಾಗಿದ್ದು, ಬಾಬೂಜಿ ಮೆಮೋರಿ0ುಲ್ ಆಶ್ರಮದ ಹಳೆ0ು ಶ0ುನ ಶಾಲೆಗಳಿಂದ ಕಳಚಿದ ವಸ್ತುಗಳಾಗಿವೆ.

ಇದರ ಜೊತೆ0ುಲ್ಲಿ ಶ0ುನ ಶಾಲೆ, ಕ್ಯಾಂಟೀನ್, ಅಡಿಗೆ0ು ಮನೆ, ಉಪಹಾರ ಮಂದಿರ, ಮಕ್ಕಳ ಚಟುವಟಿಕೆಗಳಿಗಾಗಿ ವ್ಯವಸ್ಥೆ, ಓದುವುದಕ್ಕಾಗಿ ವಿಶೇಷವಾದ ವ್ಯವಸ್ಥೆಗಳನ್ನು ಮಾಡಲಾಗಿದೆ. 2009 ಮಕ್ಕಳಿಗಾಗಿ ಸಾಧನಗಳನ್ನೊಳಗೊಂಡಿರುವ ಆಟವಾಡುವ ಪ್ರದೇಶವನ್ನೂ ಹಾಗೂ ಗ್ರಂಥಾಲ0ುನ್ನೂ ಸ್ಥಾಪಿಸಲಾಯಿತು.

ಸುಮಾರು 6 ವರ್ಷಗಳಿಂದ ತಿಂಗಳ ಮೊದಲನೆ0ು ಭಾನುವಾರದಂದು ವೈದ್ಯ ವೃತ್ತಿ0ುಲ್ಲಿರುವ ನಮ್ಮ ಅಭ್ಯಾಸಿಗಳು ಸುತ್ತಮುತ್ತಲಿರುವ ಹಳ್ಳಿಗಳ ಜನರಿಗಾಗಿ ಎಸ್.ಎಮ್.ಎಸ್.ಎಫ್ ಪ್ರಾ0ುೋಜಿಕತ್ವದಲ್ಲಿ ವೈದ್ಯಕೀ0ು ಶಿಬಿರಗಳನ್ನು ನಡೆಸುತ್ತಿದ್ದಾರೆ.

1992 ರಲ್ಲಿಸುಮಾರು 65 ಅಭ್ಯಾಸಿಗಳಿದ್ದು, ಈಗ ಭಾನುವಾರದ ಸತ್ಸಂಗದ ಸಂಖ್ಯೆ0ು 450ಕ್ಕೆ ಏರಿದೆ. ಗುರುಗಳು ಮೊದಲನೆ0ು ಬಾರಿ ಬಂದಾಗ ಈ ಜಾಗವು ಬಂಜರಾಗಿದ್ದನ್ನು ಕಂಡು 'ಇದನ್ನು ಹಸಿರಾಗಿ ಮಾಡಿ' ಎಂದು ಹೇಳಿದ್ದರು. ಅವರ ಕೃಪೆಯಿಂದ ಈಗ ಆಶ್ರಮವು ಹಸಿರು ಮರಗಳಿಂದ ಸುತ್ತುವರೆದು ಬಹಳ ರಮ್ಯವಾಗಿ ಕಂಗೊಳಿಸುತ್ತಿದ್ದು, ಅಲ್ಲಿನ ವಾತಾವರಣವನ್ನು ತಂಪಾಗಿ, ಪ್ರಶಾಂತವಾಗಿ ಹಾಗೂ ಶುದ್ಧವಾಗಿರಿಸಿವೆ.





**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.